

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 | Issue : 260 | Friday 27-06-2025 | E-mail : maruti.b.hosamani76@gmail.com | Page: 4 | Price : Rs. 1/-


## ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಅಭಿವೃದ್ಧಿ ಕಾಮಗಾರಿಗೆ ಅನುದಾನ ನೀಡಿಲ್ಲ-ಮಾಜಿ ವಿಧಾನ ಪರಿಷತ್ ಸದಸ್ಯ ಅರುಣ್ ಶಾಹಾಪುರ






**ಸಿಹಿ ಕಹಿ ಸುದ್ದಿ,**

**ಮುದ್ದೇಬಿಹಾಳ :** ಮಳೆ ಬರುತ್ತಿರುವುದರಿಂದ ಇತ್ತೀಚಿಗೆ ಗಜೇಂದ್ರಗಡ ತಾಲೂಕಿನಲ್ಲಿ ಸರ್ಕಾರಿ ಶಾಲೆ, ಮೇಲ್ಚಾವಣಿ ಕುಸಿದು ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಹಾನಿಯಾಗಿದೆ. ಅದ-ಕ್ಕೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ಅರುಣ್ ಶಹಾಪುರ ಹೇಳಿದರು. ಅವರು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದರು. ಈ ಹಿಂದೆ ಬಸವರಾಜ್ ಬೊಮ್ಮಾಯಿ ಸರ್ಕಾರ ಇದ್ದಾಗ ಬಿ.ಸಿ. ನಾಗೇಶ್. ಸಚಿವರು ಕೊಠಡಿಗಳ ನಿರ್ಮಾಣ ಕಾರ್ಯ ಕೈಗೊಂಡರು. ಅದನ್ನು ಬಿಟ್ಟರೆ ಈಗಿನ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಹಣ ನೀಡಿಲ್ಲಾ. ಕಾರಣ ಇದರ ನೈತಿಕ ಹೊಣೆಯನ್ನು ಸಿ.ಎಂ ಸಿದ್ದರಾಮಯ್ಯ ಅವರೆ ಹೊರಬೇಕು. ಹೀಗಾಗಿ ಈ ಬಾರಿ ಉತ್ತಮ ಮಳೆ ಇದೆ ಎಂದು ಹಲವಾರು ಮಾಹಿತಿ ನೀಡಿದ್ದು. ಸರ್ಕಾರ ತಕ್ಷಣ ಬಡ ಸರ್ಕಾರಿ ಶಾಲೆಯಲ್ಲಿನ ಮಕ್ಕಳ ಸಲುವಾಗಿ ಶಿಥಿಲವಾದ ಕಟ್ಟಡಗಳ ದುರಸ್ತಿ ಮತ್ತು ಹೊಸ ಕಟ್ಟಡಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿ 30% ಹುದ್ದೆಗಳು ಖಾಲಿ ಇವೆ. ಹಾಗೆ ಕೆಲವೊಂದಿಷ್ಟು ಪದೋನ್ನತಿಗಳು ದುಡ್ಡು ಕೊಟ್ಟವರಿಗೆ ಮಾತ್ರ ನೀಡುತ್ತಿದ್ದಾರೆ.

ಇಂಥ ದುರಾಡಳಿತ ಕರ್ನಾಟಕದಲ್ಲಿ ನಡೆ-ಯುತ್ತಿದೆ. ಹೀಗಾಗಿ ಶಿಕ್ಷಣಕ್ಕೆ ಸೂಕ್ತವಾದ ಆದ್ಯತೆ ನೀಡಿ. ಅನುದಾನ ನೀಡಿ ಜನರು ಹೇಳಿ ಮಾಧ್ಯಮದಲ್ಲಿ ಕೆಟ್ಟ ಸುದ್ದಿ ಆಗುವಂತೆ ದುರಾಡಳಿತ ಬೇಡ ಎಂದು ಹೇಳಿದರು.

ಈ ವೇಳೆ ಭಾ.ಜ.ಪ ಜಿಲ್ಲಾ ಕಾರ್ಯದರ್ಶಿ ಮಲ್ಲಿಕಾರ್ಜುನ್ ದೇವರಮನಿ. ಮಂಡಲ ಅಧ್ಯಕ್ಷ ಜಗದೀಶ್ ಪಂಪಣ್ಣವರ್. ಮಂಡಲ ಪ್ರಧಾನ ಕಾರ್ಯದರ್ಶಿ ಸಂಜು ಬಾಗೇವಾಡಿ. ಪಕ್ಷದ ಮುಖಂಡರಾದ. ಅಶೋಕ್ ಚಿನಿವಾರ. ಶ್ರೀ ಶೈಲ್ ದೊಡಮನಿ. ರಾಜು ಬಳ್ಳೊಳ್ಳಿ. ಅಶೋಕ್ ರಾಥೋಡ್. ಪರಶುರಾಮ ನಾಲ್ತವಾಡ. ರವೀಂದ್ರ ಬಿರಾದಾರ್. ಸಂತೋಷ್ ಬಾದರಬಂಡಿ. ಮಾಂತಗೌಡ ಕಾಶಿನಕುಂಟಿ. ವೀರೇಶ್ ಡವಳಗಿ. ಅನಿಲ್ ರಾಟೋಡ್.ಶಿವರಾಜ್ ರಾಥೋಡ್. ನಿಖಿಲ್ ಮಲಗಲದಿನ್ನಿ. ಪ್ರಭುಗೌಡ ಬಿರಾದಾರ್. ಉಪಸ್ಥಿತರಿದ್ದರು. ಬಿಜೆಪಿ ಮುಖಂಡ ಸಂಗನಗೌಡ ಪಾಟೀಲ್ ಅವರು ಮಾಜಿ ವಿಧಾನ ಪರಿಷತ್ತಿ ಸದಸ್ಯ ಅರುಣ್ ಶಾಹಾಪುರ ಅವರಿಗೆ ಸನ್ಮಾನಿಸಿ ಗೌರವಿಸಿದರು. ಈ ವೇಳೆ ಸೋಮನಗೌಡ ಪಾಟೀಲ್ ನಡಹಳ್ಳಿ. ಇನ್ನೂ ಅನೇಕ ಮುಖಂಡರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ**
**ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಬಸವರಾಜ.ಸಂಕನಾಳ.**
**ಮುದ್ದೇಬಿಹಾಳ**

## ಜೋಳ ಖರೀದಿ ಕೇಂದ್ರದ ದಿನಾಂಕವನ್ನು 15 ದಿನಗಳ ವರೆಗೆ ವಿಸ್ತರಿಸಿ – ಕೆ.ಆರ್.ಎಸ್ ಪಕ್ಷದ ಮನವಿ




**ಸಿಹಿ ಕಹಿ ಸುದ್ದಿ,**

**ಸಿಂಧನೂರು :** ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಸಿಂಧನೂರಿನಲ್ಲಿ ಉಪ ತಹಶೀಲ್ದಾರರ ಮುಖಾಂತರ ಮುಖ್ಯಮಂತ್ರಿಗಳು ಸಿದ್ದರಾಮಯ್ಯ ಅವರಿಗೆ ಜೋಳ ಖರೀದಿ ಕೇಂದ್ರದ ದಿನಾಂಕವನ್ನು 15 ದಿನಗಳ ವರೆಗೆ ವಿಸ್ತರಿಸ ಬೇಕೆಂದು ಮನವಿ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಮನವಿಯ ಉದ್ದೇಶಿಸಿ ಮಾತನಾಡಿದ ರಾಜ್ಯ ರೈತ ಘಟಕದ ಪ್ರಧಾನ ಕಾರ್ಯದರ್ಶಿ ನಿರುಪಾದಿ.ಕೆ ಗೋಮರ್ಸಿ ಅವರು ರಾಯಚೂರು ಜಿಲ್ಲೆಯಲ್ಲಿ ರೈತರು ಹೆಚ್ಚಿನ ಜೋಳವನ್ನು ಬೆಳೆದಿದ್ದು ವಿಶೇಷ ಎಂಬಂತೆ ಸಿಂಧನೂರು ತಾಲೂಕಿನಲ್ಲಿ ರೈತರು ಹೆಚ್ಚಿನ ಜೋಳವನ್ನು ಬೆಳೆದಿರುತ್ತಾರೆ. ಈಗಾಗಲೇ ಸುಮಾರು ಐದಾರು ತಿಂಗಳ ಗಳಿಂದ ಮುಂಗಾರು ಮತ್ತು ಹಿಂಗಾರು ಜೋಳ ಖರೀದಿ ಪ್ರಕ್ರಿಯೆ ಜಿಲ್ಲೆ ಹಾಗೂ ತಾಲೂಕಿನಲ್ಲಿ ನಡೆಯುತ್ತಿದ್ದರೂ ಸಹ ಅಧಿಕಾರಿಗಳು ಹಾಗೂ ಕೇಂದ್ರಗಳ ಸಮಸ್ಯೆಗಳಿಂದಾಗಿ ಸರ್ಕಾರ ಸರಿಯಾದ ಸಮಯಕ್ಕೆ ಜೋಳ ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡದ ಪರಿಣಾಮ ಮತ್ತು ಈ ವರ್ಷ ಸಿಂಧನೂರು ಭಾಗದಲ್ಲಿ ಹೆಚ್ಚಿನ ಪ್ರಮಾಣದ ಮಳೆಯಾಗಿರುವ ಕಾರಣ ರೈತರು ನೋಂದಣಿ ಮಾಡಿದ ಜೋಳ ಖರೀದಿ ಕೇಂದ್ರಕ್ಕೆ ಸರ್ಕಾರ ನಿಗದಿ ಮಾಡಿದ ದಿನಾಂಕ 30/6/2025 ಕೊನೆಯ ದಿನ ಇರುವ ಕಾರಣ ನೋಂದಣಿಯಾದ ಎಲ್ಲಾ ರೈತರು ಜೋಳದ ಕೇಂದ್ರಕ್ಕೆ ತೂಕ ಮಾಡಿ ಖರೀದಿ ಕೇಂದ್ರಕ್ಕೆ ನಾನ ಕಾರಣಗಳಿಂದಾಗಿ ಜೋಳ ಸಾಗಿಸುವಲ್ಲಿ ಸಾಧ್ಯವಾಗದ ಕಾರಣ ಸಿಂಧನೂರು ತಾಲೂಕಿನ ರೈತರ ಸ್ಥಿತಿ ಚಿಂತಾಜನಕವಾಗಿದೆ ಸಾವಿರಾರು ಕ್ವಿಂಟಾಲ್ ಜೋಳಗಳು ರೈತರ ಬಳಿ ಉಳಿದಿದ್ದು ಸರ್ಕಾರದ ಖರೀದಿ ಸೌಲಭ್ಯಗಳಿಂದ ವಂಚಿತರಾಗುತ್ತಾರೆ.

ಒಂದು ವೇಳೆ 30/06/2025 ರಂದೇ ಕೇಂದ್ರಗಳನ್ನು ಮುಚ್ಚಿದಲ್ಲಿ ಸಾವಿರಾರು ರೈತರು ಕಷ್ಟಪಟ್ಟು ಬೆಳೆದ ಜೋಳ ಮಧ್ಯವರ್ತಿಗಳಿಗೆ, ದಲ್ಲಾಳಿಗಳಿಗೆ ಖಾಸಗಿಯವರಿಗೆ ಮಾರುವ ಪರಿಸ್ಥಿತಿ ಉಂಟಾಗಲಿದ್ದು ರೈತರು ಸಾಲದ ಕೂಪಕ್ಕೆ ಜಾರಲಿದ್ದಾರೆ. ಹಾಗಾಗಿ ಈ ಮೇಲಿನ ಎಲ್ಲಾ ಅಂಶಗಳನ್ನು ಸೂಕ್ಷ್ಮ ರೀತಿಯಲ್ಲಿ ಪರಿಗಣಿಸಿ ರೈತರ ಜೋಳ ಖರೀದಿಗೆ ಈಗಾಗಲೇ ನೀಡಿದ ಗಡುವಿನ ದಿನಾಂಕಕ್ಕಿಂತ ಇನ್ನೂ 15 ದಿನಗಳ ವರೆಗೆ ವಿಸ್ತರಣೆ ಮಾಡಬೇಕೆಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಆಗ್ರಹದ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಶರಣಪ್ಪ ಬೇರಿಗೆ, ಶರಣಪ್ಪ ಜನತಾ ಕಾಲೋನಿ, ಅಜೀದ್ ಕುನಟಿಗೆ, ಕನಕಪ್ಪ ಎಲೆಕೂಡ್ಲಿಗಿ, ಹನುಮಂತ ಸುಕಲ್ಪೇಟೆ, ಜಗದೀಶ್ ಸುಲ್ತಾನಾಪುರ, ಶಂಸುದ್ದೀನ್ ಗೋಮರ್ಸಿ, ಹನುಮಂತ ಮುದ್ದಾಪುರ ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರತಾಪ್.ವಾಯ್.ಕಿಳ್ಳಿ.ಇಲಕಲ್ಲ**

## ಜಮಖಂಡಿ, ರಬಕವಿ ಬನಹಟ್ಟಿ ತಾಲೂಕುಗಳಲ್ಲಿ ಖಾಸಗಿ ಶಾಲೆಗಳಲ್ಲಿ ಸ್ಟೇಷನರಿ ದಂಧೆ? ದುಬಾರಿ ಶುಲ್ಕದ ಜೊತೆ ಶೈಕ್ಷಣಿಕ ಸಾಮಗ್ರಿ ಮಾರಾಟ ನೆಪದಲ್ಲಿ ಹಣ ಸುಲಿಗೆ ಆರೋಪ

**ರಬಕವಿ–ಬನಹಟ್ಟಿ:** ನಿಯಮಕ್ಕಿಂತ ಅಧಿಕ ಶುಲ್ಕ ಪಡೆದು ಮಕ್ಕಳ ದಾಖಲಾತಿ ಮಾಡಿಕೊಂಡ ಕೆಲವು ಖಾಸಗಿ ಶಾಲೆಗಳಲ್ಲಿ ಇದೀಗ ಶೈಕ್ಷಣಿಕ ಸಾಮಗ್ರಿ ಮಾರಾಟ ನೆಪದಲ್ಲಿ ಹಣ ಸುಲಿಗೆ ಮಾಡುತ್ತಿರುವ ಆರೋಪ ಕೇಳಿ ಬಂದಿದೆ.

ಜಮಖಂಡಿ ನಗರ ಸೇರಿದಂತೆ ತಾಲೂಕಿನ ಹಾಗೂ ರಬಕವಿ ಬನಹಟ್ಟಿಯ ಅವಳಿ ನಗರ ಸೇರಿದಂತೆ ತಾಲೂಕಿನ ಕೆಲ ಖಾಸಗಿ ಶಾಲೆಗಳಲ್ಲಿ ಸಮವಸ್ತ್ರ, ಡಿಕ್ಷನರಿ, ನೋಟ್ ಬುಕ್ ಸೇರಿದಂತೆ ಇನ್ನಿತರ ವಸ್ತುಗಳನ್ನು ಶಾಲೆಯಿಂದಲೇ ಖರೀದಿಸುವಂತೆ ಒತ್ತಡ ಹೇರುತ್ತಿರುವ ಬಗ್ಗೆ ಪಾಲಕರು ದೂರುತ್ತಿದ್ದಾರೆ.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರೂ ಶಾಲಾ ಆಡಳಿತ ಮಂಡಳಿ ಕ್ಯಾರೇ ಎನ್ನುತ್ತಿಲ್ಲ ! ಇಲಾಖೆಯ ಅಧಿಕಾರಿಗಳಿಗೆ ಈ ಕುರಿತು ಎಲ್ಲ ವಿಚಾರ ತಿಳಿಸಿದ್ದರೂ ಕೂಡ ಕ್ರಮ ಜರುಗಿಸುತ್ತಿಲ್ಲವೆಂದು ಪಾಲಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದಾಖಲಾತಿ ಸಂದರ್ಭದಲ್ಲಿ ಸರ್ಕಾರದ ಮಾಗ9ಸೂಚಿ ಉಲ್ಲಂಘಿಸಿ, ಹೆಚ್ಚಿನ ಶುಲ್ಕ, ಡೋನೇಶನ್ ಪಡೆಯಲಾಗುತ್ತಿದೆ ಹೇಳಲಾಗುತ್ತಿದೆ. ಶಿಕ್ಷಣಾಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲವಾದ್ದರಿಂದ ಖಾಸಗಿ ಶಾಲೆಗಳ ಸುಲಿಗೆಗೆ ಅಂಕುಶವೇ ಇಲ್ಲದಂತಾಗಿದೆ.

ಶಿಕ್ಷಣ ಹಕ್ಕು ಕಾಯ್ದೆ – 2009 ಹಾಗೂ ಕನಾ9ಟಕ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣ ಹಕ್ಕು ನಿಯಮ – 2012 ರ ಅನ್ವಯ ಜಿಲ್ಲೆಯ ಎಲ್ಲ ಖಾಸಗಿ ಅನುದಾನರಹಿತ ಶಾಲೆಗಳು ಶಾಲೆಯಲ್ಲಿ ಲಭ್ಯವಿರುವ ಸೌಲಭ್ಯ, ಬೋಧನಾ ಶುಲ್ಕವನ್ನು ಶಾಲೆಯ ವೆಬ್ ಸೈಟ್, ಸೂಚನಾ ಫಲಕದಲ್ಲಿ ಮತ್ತು ಶಿಕ್ಷಣ ಇಲಾಖೆ ಜಾಲತಾಣ (ಎಸ್‌ಎಟಿಎಸ್) ದಲ್ಲಿ ಪ್ರಕಟಿಸಬೇಕು. ಆದರೆ ಶಾಲೆ ವೆಬ್ ಸೈಟ್ ಮತ್ತು ಆಪ್ ಮಾಡಲೂ ಕೂಡ ಮಕ್ಕಳಿಂದ ಪ್ರತ್ಯೇಕ ಶುಲ್ಕ ವಸೂಲಿ ಮಾಡಲಾಗುತ್ತಿದೆ.

ಗ್ರಾಮೀಣಪ್ರದೇಶದಖಾಸಗಿಶಾಲೆಗಳಿಗಿಂತಲೂ ಜಮಖಂಡಿ, ರಬಕವಿ ಬನಹಟ್ಟಿ ಶಹರುಗಳಲ್ಲಿನ ಶಾಲೆಗಳಲ್ಲಿ ಶೈಕ್ಷಣಿಕ ಸಾಮಗ್ರಿಗಳ ಮಾರಾಟ ದಂಧೆ ಮಿತಿಮೀರಿದೆ. ಕೆಲವು ಶಾಲೆಗಳ ಶಿಕ್ಷಕರು ಮನೆಯಲ್ಲಿ ಟ್ಯೂಶನ್ ಹೇಳುತ್ತೇವೆ. ಮಕ್ಕಳನ್ನು ಕಳುಹಿಸಿ ಎನ್ನುತ್ತಾರೆ. ಫುಡ್ ಫೆಸ್ಟಿವಲ್ ಆಯೋಜಿಸಿ ತಿಂಡಿ ತಿನಿಸುಗಳನ್ನು ಮಾರಾಟ ಮಾಡುತ್ತಾರೆ. ಈ ತೆರನಾದ ತೆವಲು ಇದೀಗ ಸರ್ಕಾರಿ ಶಾಲೆಗಳಲ್ಲಿಯೂ ಆಯೋಜಿಸಲಾಗುತ್ತಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಓರ್ವ ಶಿಕ್ಷಣ ತಜ್ಞರೊಬ್ಬರು, "ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಸೇರಿದಂತೆ ಸಕಲ ಸೌಲಭ್ಯ ಉಚಿತವಿದ್ದರೂ, ಖಾಸಗಿ ಶಾಲೆಗಳೇ ಶ್ರೇಷ್ಠ ಎಂಬಂತೆ ತಮ್ಮ ಮಕ್ಕಳನ್ನು ಪೋಷಕರು ಅಲ್ಲಿಗೇ ಕಳುಹಿಸುತ್ತಾರೆ.

ಖಾಸಗಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಗೆ ಸಂಬಂಧಿಸಿದಂತೆ ಶುಲ್ಕ ನಿಗದಿ ಸೇರಿದಂತೆ ಕೆಲ ನಿಯಮ ಪಾಲಿಸಬೇಕು ಎಂಬ ಸೂಚನೆಯನ್ನು ಶಿಕ್ಷಣ ಇಲಾಖೆ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನೀಡಿದೆ. ಆದರೆ, ಕೆಲವು ಶಾಲೆಗಳಲ್ಲಿ ಪಾಲನೆ ಆಗದಿರುವ ಬಗ್ಗೆ ಆರೋಪಗಳಿರುವುದು ನಿಜ. ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳಲು ಪ್ರಯತ್ನಿಸಿದರೆ ಜನಪ್ರತಿನಿಧಿಗಳು ಆಯಾ ಶಾಲೆಗಳ ಪರವಾಗಿ ನಿಲ್ಲುತ್ತಾರೆ ಮತ್ತು ಹೆಚ್ಚಿನ ಖಾಸಗಿ ಶಾಲೆಗಳು ಜನಪ್ರತಿನಿಧಿಗಳ ಪತ್ನಿಯರು, ಮಕ್ಕಳ ಹೆಸರಿನಲ್ಲಿ ಇರುತ್ತವೆ" ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

## ಪೊಲೀಸ್ ರ್‍ಯಾಲಿ ಮೂಲಕ ಮಾದಕ ದ್ರವ್ಯ ವಿರೋಧಿ ದಿನಾಚರಣೆ

**ಸಿಹಿ ಕಹಿ ಸುದ್ದಿ,**

**ಕೊಟ್ಟೂರು:** ಡ್ರಗ್ ದುರುಪಯೋಗ ಮತ್ತು ಅಕ್ರಮ ಕಳ್ಳ ಸಾಗಣೆ ವಿರುದ್ಧದ ಅಂತರರಾಷ್ಟ್ರೀಯ ದಿನವನ್ನು ವಿಶ್ವ ಡ್ರಗ್ ಡೇ ಎಂದೂ ಕರೆಯಲಾಗುತ್ತದೆ. ಇದನ್ನು ಪ್ರತಿ ವರ್ಷ ಜೂನ್ 26 ರಂದು ಮಾದಕ ವ್ಯಸನ ಮುಕ್ತ ಜಗತ್ತನ್ನು ನಿರ್ಮಿಸಲು ಕ್ರಮ ಮತ್ತು ಸಹಕಾರವನ್ನು ಬಲಪಡಿಸಲು ಆಚರಿಲಾಗುತ್ತದೆ. ಪ್ರತಿ ವರ್ಷ ಪ್ರಪಂಚದಾದ್ಯಂತದ ವಿವಿಧ ಸಂಸ್ಥೆಗಳು ವಿಶ್ವ ಮಾದಕವಸ್ತು ದಿನವನ್ನು ಆಚರಿಸುತ್ತವೆ. ಜೊತೆಗೆ ಸಮಾಜಕ್ಕೆ ನಿಷೇಧಿತ ಮಾದಕ ವಸ್ತುಗಳು ಉಂಟು ಮಾಡುವ ಪ್ರಮುಖ ಸಮಸ್ಯೆಯ ಬಗ್ಗೆ ಜಾಗೃತಿ ಮೂಡಿಸಲು ಕೊಟ್ಟೂರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ದೊಡ್ಮನೆ ಮಲ್ಲೇಶ್, ಡಿವೈಎಸ್ಪಿ ನೇತೃತ್ವದಲ್ಲಿ ಕೊಟ್ಟೂರು ಪೊಲೀಸ್ ಮತ್ತು ಪಟ್ಟಣದ ಕಾಲೇಜು ಸೇರಿದಂತೆ 26 ಜೂನ್ 2025 ರಂದು



ರ್‍ಯಾಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಕನ್ನಡದ ಖ್ಯಾತ ಸಾಹಿತಿ ಕುಂಬಾರ್ ವೀರಭದ್ರಪ್ಪ ರವರು ಮಾದಕ ದ್ರವ್ಯ ಮತ್ತು ದುಶ್ಚಟಗಳಿಂದ ಕಾಲೇಜು ವಿದ್ಯಾರ್ಥಿಗಳು ಹಾಗೂ ಯುವಕರು ದೂರ ವಿರಬೇಕು, ಮಾದಕ ದ್ರವ್ಯ ವಸ್ತುಗಳ ಸಾಗಟ-ಕ್ಕೆ ಕಡಿವಾಣ ಹಾಕಬೇಕು ಆದ್ದ-ರಿಂದ ಕರ್ನಾಟಕದಲ್ಲಿ ಪೊಲೀಸ್ ಸಿಬ್ಬಂದಿ ಸಂಖ್ಯೆ ಕಡಿಮೆ ಇದೆ ಪೊಲೀಸ್ ಹುದ್ದೆಗಳನ್ನು ಭರ್ತಿ ಮಾಡುವುದರ ಮೂಲಕ ಹೆಚ್ಚಿಸಿ ಕೊಳ್ಳಬೇಕು ಎಂದು ಮಾತನಾಡಿದರು. ನಂತರ ಡಿವೈಎಸ್ಪಿ ದೊಡ್ಮನಿ ಮಲ್ಲೇಶ್ ಅವರು ಯಾರಾದರೂ ಮಾದಕ ದ್ರವ್ಯಗಳನ್ನು ಸೇವನೆ ಮಾಡುವುದು ಕಂಡು ಬಂದರೆ ಹಾಗೂ ಯುವಕರು ಸೇವನೆ ಮಾಡುತ್ತಿದ್ದರೆ ಅದನ್ನು ಸೂಕ್ಷ್ಮವಾಗಿ ಪೊಲೀಸ್ ಮತ್ತು ಪತ್ರಿಕಾಮಾಧ್ಯಮದವರಿಗೆಹಾಗೂ ತಮ್ಮ ತಂದೆ ತಾಯಿಯವರಿಗೆ ತಿಳಿಸಬೇಕು ಒಟ್ಟಿನಲ್ಲಿ ಸಹಕಾರ ನೀಡಿದರೆ ಪೊಲೀಸ್ ಸಿಬ್ಬಂದಿ ವರ್ಗವೂ ಮಾದಕ ದ್ರವ್ಯ ವಸ್ತುಗಳನ್ನು ಕಡಿವಾಣ ಹಾಕಲು ಸಹಕಾರವಾಗುತ್ತದೆ ಎಂದು ಮಾತನಾಡಿದರು. ಈ ಸಂದರ್ಭದಲ್ಲಿ ವೆಂಕಟಸ್ವಾಮಿ ಸಿಪಿಐ ಗೀತಾಂಜಲಿ ಸಿಂಧೆ ಪಿಎಸ್ಐ ಮತ್ತು ಪೊಲೀಸ್ ಸಿಬ್ಬಂದಿ ವರ್ಗದವರು ಹಾಗೂ ಪಟ್ಟಣದ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ.ಕೊಟ್ಟೂರು**

## ಮುಸ್ಲಿಂ ಧಾರ್ಮಿಕ ಆಸ್ತಿಗಳಲ್ಲಿ ಹಿಂದೂಗಳ ಹಕ್ಕಿದೆ: ತೊಗಾಡಿಯಾ

**ಜಮಖಂಡಿ:** ಕೇವಲ ಹಿಂದೂ ದೇವಾಲಯಗಳು ಮಾತ್ರವಲ್ಲದೇ ಮುಸ್ಲಿಂ ಸಮುದಾಯದ ಖಬರಸ್ಥಾನ, ಮಸೀದಿಗಳು ಮತ್ತು ಧಾರ್ಮಿಕ ಆಸ್ತಿಗಳಲ್ಲಿ ಕೂಡ ಹಿಂದೂಗಳ ಹಕ್ಕಿದೆ ಎಂದು ರಾಷ್ಟ್ರೀಯ ಹಿಂದೂ ನಾಯಕ ಡಾ. ಪ್ರವೀಣಭಾಯಿ ತೊಗಾಡಿಯಾ ಹೇಳಿದರು.

ನಗರದ ಎಸ್.ಆರ್.ಎ. ಕ್ಲಬ್ ಸಭಾ ಭವನದಲ್ಲಿ ಹಿಂದೂ ಕಾರ್ಯಕರ್ತರೊಂದಿಗೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,

ಸೃಷ್ಠಿಯನ್ನು ಸೃಷ್ಠಿಸಿದ ಬ್ರಹ್ಮ ಸೃಷ್ಠಿಯ ಸಹಿತ ಸ್ತ್ರೀ–ಪುರುಷ ಎಂಬ ಅಂಶವನ್ನು ಹುಟ್ಟಿ ಹಾಕಿದ ದಿನದಿಂದ ನಮ್ಮ ಪೂರ್ವಜರೆಲ್ಲ ಪ್ರತಿಯೊಬ್ಬರೂ ಹಿಂದೂಗಳಾಗಿ ಜೀವನ ಸಾಗಿಸಿದ್ದಾರೆ ಎಂದರು.

ಸೃಷ್ಠಿ ಹುಟ್ಟಿ ಕೋಟಿ ವರ್ಷಗಳು ಕಳೆದರೂ ಭಗವಂತ ಹಿಂದೂಗಳನ್ನು ಸೃಷ್ಟಿ ಮಾಡಿ ಭೂಮಿಯ ಮೇಲೆ ಬಿಟ್ಟರು. ನಮ್ಮ ಹಿಂದೂ ದೇಶ ಸುಖ, ಶಾಂತಿ, ಧನ, ದಾನ್ಯ, ಸಂಪತ್ತು, ಸಮೃದ್ಧಿ ಹೊಂದಿದೆ. ಸುಸಂಸ್ಕೃತ ಹಿಂದೂ ಧರ್ಮ ನಮ್ಮದು. ಅಂತಹ ಸನಾತನ ಹಿಂದೂ ಧರ್ಮದಲ್ಲಿ ಹಲವರು ಧರ್ಮದ್ರೋಹಿಗಳಿದ್ದು, ಇಂದು ಹಿಂದೂ ಧರ್ಮವು ಅಳಿವಿನಂಚಿನಲ್ಲಿದೆ




ಎಂದರು.

ಹಿಂದೂಗಳ ಸರಾಸರಿ ಅನುಪಾತ 1:7 ಇದ್ದರೆ ಮುಸ್ಲಿಂರ ಸಂಖ್ಯೆ 2:4 ಇದೆ. ಹಿಂದೂಗಳ ಸಂಖ್ಯೆ ಭಾರತದಲ್ಲಿ ಕಡಿಮೆಯಾಗುತ್ತಿದೆ. ಕಳೆದ 25 ವರ್ಷದಿಂದ ಗುಜರಾತನಿಂದ ಹಿಂದುಗಳನ್ನು ಒಗ್ಗೂಡಿಸುವ ಕೆಲಸ ಆರಂಭಿಸಲಾಗಿದೆ. ಇಂದು ರಾಮ ಮಂದಿರ ನಿರ್ಮಾಣದವರೆಗೆ, ಕುಂಭಮೇಳದವರೆಗೆ ನಾನು ಹಿಂದೂಗಳನ್ನು ಸಂಘಟಿಸುತ್ತಿದ್ದೇನೆ.

ಮುಸ್ಲಿಮರಿಗೆ ಕಾನೂನು ಜಾರಿ ಮಾಡಿ, ಬಾಂಗ್ಲಾ ವಲಸಿಗರನ್ನು ಹೊರದಬ್ಬಿಸಿ ಭಾರತ ದೇಶದಲ್ಲಿ ಜನಸಂಖ್ಯಾ ನಿಯಂತ್ರಣ ಕಾಯ್ದೆ ಬರಬೇಕು. ಹಿಂದೂ ರಾಷ್ಟ್ರ ಹಿಂದೂ ಧರ್ಮ ಉಳಿಸಲು ಹಿಂದೂಗಳು ಒಂದಾಗಬೇಕಿದೆ. ಹಿಂದೂಗಳಿಂದ ಬಲಿಷ್ಠವಾದ ಸಂಘಟನೆಯಾಗಬೇಕಾಗಿದೆ ಎಂದರು.

ಸಂವಾದ ವೇದಿಕೆಯಲ್ಲಿ ವಿಶ್ವ ಹಿಂದೂ ಪರಿಷತ್ ರಾಜ್ಯ ಮುಖಂಡ ರಮೇಶ ಕುಲಕರ್ಣಿ, ಹುಲ್ಯಾಳದ ದುಂಡಯ್ಯ ಶ್ರೀಗಳು, ಸುರೇಶ ಮೀಶಿ, ನಿಖಿಲ ಮಹಾಬಳಶೆಟ್ಟಿ, ಉಮೇಶ ಆಲಮೇಲ್ಕರ, ರಾಯಬಾ ಜಾಧವ ಸಹಿತ ಇನ್ನೂ ಹಲವರು ಭಾಗವಹಿಸಿದ್ದರು.

### ವಿಕೇಂದ್ರೀಕರಣ ವ್ಯವಸ್ಥೆಗೆ ಬಲ ತುಂಬುವ ಕೆಲಸ ಮಾಡೋಣ: ಚನ್ನರಾಜ ಹಟ್ಟಿಹೊಳಿ

## ಗ್ರಾಮ ಪಂಚಾಯಿತಿ ನೂತನ ಕಟ್ಟಡ ಉದ್ಘಾಟನೆ

**ಇಟಗಿ (ಬೆಳಗಾವಿ) :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಬೆಳಗಾವಿ, ತಾಲೂಕಾ ಪಂಚಾಯತ್ ಖಾನಾಪುರ ಹಾಗೂ ಗ್ರಾಮ ಪಂಚಾಯತ್ ಇಟಗಿ ಇವರ ಸಂಯುಕ್ತ ಆಶ್ರಯ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ನಿರ್ಮಿಸಲಾದ ಗ್ರಾಮ ಪಂಚಾಯತ್ ಇಟಗಿಯ ನೂತನ ಕಟ್ಟಡ ಹಾಗೂ ಸಭಾ ಭವನವನ್ನು ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಶುಕ್ರವಾರ ಉದ್ಘಾಟಿಸಿದರು.

ಸರಕಾರದಿಂದ ಬಿಡುಗಡೆಯಾಗುವ ಹಣ ಮಧ್ಯವರ್ತಿಗಳಿಲ್ಲದೆ ನೇರವಾಗಿ ಗ್ರಾಮ ಪಂಚಾಯಿತಿಗೆ ತಲುಪಿದಾಗ ಯಾವುದೇ ಯೋಜನೆ ಯಶಸ್ವಿಯಾಗುತ್ತದೆ.

ಗ್ರಾಮ ಪಂಚಾಯಿತಿಗಳು ವಿಕೇಂದ್ರೀಕರಣ ವ್ಯವಸ್ಥೆಯ ಅತ್ಯಂತ ಪ್ರಮುಖ ಹಂತವಾಗಿದ್ದು, ಇದಕ್ಕೆ ಬಲತುಂಬಿದಾಗ ಪ್ರಜಾಪ್ರಭುತ್ವ ಅರ್ಥಪೂರ್ಣವಾಗುತ್ತದೆ.

ಯಾವುದೇ ಊರಿನ ಶಾಲೆ ಮತ್ತು ಪಂಚಾಯಿತಿ ಸ್ಥಿತಿ ಗತಿ ನೋಡಿದರೆ ಆ ಊರಿನ ಸ್ಥಿತಿ ಗೊತ್ತಾಗುತ್ತದೆ. ಹಾಗಾಗಿ ಇವೆರಡನ್ನು



ಉತ್ತಮಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿ. ಎಲ್ಲರೂ ಸೇರಿ ಗ್ರಾಮದ ಅಭಿವೃದ್ಧಿ ಮಾಡೋಣ, ಒಳ್ಳೆಯ ಸಮಾಜ ನಿರ್ಮಾಣ ಮಾಡೋಣ ಎಂದು ಚನ್ನರಾಜ ಹಟ್ಟಿಹೊಳಿ ಹೇಳಿದರು.

ಕಾರ್ಯಕ್ರಮದಲ್ಲಿ ಚನ್ನಮ್ಮನ ಕಿತ್ತೂರು ವಿರಕ್ತಮಠದ ಪರಮಪೂಜ್ಯ ಶ್ರೀ ಮಡಿವಾಳ ರಾಜಯೋಗಿಂದ್ರ ಮಹಾಸ್ವಾಮಿಗಳು, ನಂದಗಡ ಹಾಗೂ ಇಟಗಿ ವಿರಕ್ತಮಠದ ಶ್ರೀ ಚನ್ನವೀರ ದೇವರು, ಅವರೊಳ್ಳಿ ಬಿಳಕಿಯ ರುದ್ರಸ್ವಾಮಿ ಮಠದ ಶ್ರೀ ಚನ್ನಬಸವ ದೇವರು, ಶಾಸಕರಾದ ವಿಠ್ಠಲ ಹಲಗೇಕರ್, ಕಾರ್ಯ ನಿರ್ವಾಹಕ ಅಧಿಕಾರಿಗಳಾದ ರಮೇಶ ಮೇತ್ರಿ, ವಿಜಯಕುಮಾರ್ ಕೋತಿನ, ರೂಪಾಲಿ ಬಡಕುಂದ್ರಿ, ವಿರೇಶ ಸಜ್ಜನ, ರೋಹಿಣಿ ಬಾ ಪಾಟೀಲ,

ಗ್ರಾಮ ಪಂಚಾಯತ್ ಅಧ್ಯಕ್ಷರಾದ ರುದ್ರಪ್ಪ ತುರಮುರಿ, ಉಪಾಧ್ಯಕ್ಷರಾದ ರಾಜಶ್ರೀ ಹುಣಶೀಕಟ್ಟಿ ಹಾಗೂ ಸರ್ವ ಸದಸ್ಯರು, ಗ್ರಾಮದ ಗುರು ಹಿರಿಯರು, ಸುತ್ತಮುತ್ತಲಿನ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

# ನಮ್ಮ ಕ್ಲಿನಿಕ್‌ನಲ್ಲಿ ಅತಿಸಾರ ಭೇದಿ ನಿಯಂತ್ರಣ ಕಾರ್ಯಕ್ರಮ



**ಕೊಪ್ಪಳ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ ಇವರ ಸಂಂ–ಯುಕ್ತಾಶ್ರಯದಲ್ಲಿ ಜೂನ್ 16 ರಂದು ಕೊಪ್ಪಳ ನಗರ ಪ್ರದೇಶದ ಹಮಾಲರ ಕಾಲೋನಿಯಲ್ಲಿರುವ ನಮ್ಮ ಕ್ಲಿನಿಕ್‌ನಲ್ಲಿ ಅತಿಸಾರಭೇದಿ ನಿಯಂತ್ರಣ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ॥ ಪ್ರಕಾಶ ವಿ. ಅವರು ಮಾತನಾಡಿ, ಪ್ರಪಂಚದಲ್ಲಿ ಅತಿಸಾರ ಭೇದಿಯಿಂದ 5 ವರ್ಷದೊಳಗಿನ ಮಕ್ಕಳ ಮರಣವನ್ನು ಸೊನ್ನೆಗೆ(0) ತರುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ. ಕಲುಷಿತ ನೀರು/ಆಹಾರ ಸೇವನೆಯಿಂದ, ಕೈತೊಳೆಯದೇ ಊಟ ಮಾಡುವುದ–ರಿಂದ ಅತಿಸಾರ ಭೇದಿ ಉಂಟಾಗುತ್ತದೆ. ಅತಿಸಾರ ಭೇದಿಯಿಂದ ಮಕ್ಕಳನ್ನು ರಕ್ಷಿಸಲು ಸಾಬೂನು ಮತ್ತು ನೀರಿನಿಂದ ಕೈಗಳನ್ನು ಚೆನ್ನಾಗಿ ತೊಳೆಯಬೇಕು. ಕುಡಿಯಲು ಶುದ್ಧವಾದ ಮತ್ತು ಸುರಕ್ಷಿತ ನೀರನ್ನೇ ಬಳಸಬೇಕು. ನಿಮ್ಮ ಮನೆಯ ಪರಿಸರವನ್ನು ಶುಚಿಯಾಗಿಟ್ಟುಕೊಳ್ಳಬೇಕು, ಕಡ್ಡಾಯವಾಗಿ ಎಲ್ಲರೂ ಶೌಚಾಲಯ ಬಳಸಬೇಕು. ಮಕ್ಕಳಿಗೂ ಸಹ ಶೌಚಾಲಯ ಬಳಸುವ ರೂಢಿ ಮಾಡಬೇಕು ಎಂದು ಹೇಳಿದರು.

ನವಜಾತ ಶಿಶುಗಳಿಗೆ 06 ತಿಂಗಳವರೆಗೆ ಕೇವಲ ತಾಯಿಯ ಎದೆ ಹಾಲು ನೀಡಬೇಕು. 06 ತಿಂಗಳ ನಂತರ ಪೂರಕ ಪೌಷ್ಠಿಕ ಆಹಾರ ನೀಡಬೇಕು. ಮಕ್ಕಳಿಗೆ ಪೋಷಕಾಂಶಗಳನ್ನು ಒಳಗೊಂಡ ಪೂರಕ ಆಹಾರ ನೀಡಬೇಕು, ಲಸಿಕೆ ಹಾಕಿಸಬೇಕು ಮತ್ತು ವಿಟಮಿನ್–ಎ ಪೂರಕ ದ್ರಾವಣ ಕೊಡಬೇಕು. ಮಕ್ಕಳಿಗೆ ಅತಿಸಾರ ಭೇದಿ ಉಂಟಾದಾಗ ಒಆರ್–ಎಸ್ ದ್ರಾವಣ ಮತ್ತು ಝಿಂಕ್ ಮಾತ್ರೆಯನ್ನು ವಯಸ್ಸಿಗನುಗುಣವಾಗಿ ಕೊಡಬೇಕು ಒಆರ್‌ಎಸ್ ದ್ರಾವಣ ಜೀವಜಲವಾಗಿದ್ದು ತಪ್ಪದೇ ನೀಡುವಂತೆ ಕರೆ ನೀಡಿದರು. ಅತಿಸಾರ ಭೇದಿ ಉಂಟಾದರೆ ಯಾವುದೇ ಕಾರಣಕ್ಕೂ ನಿರ್ಲಕ್ಷ ಮಾಡಬಾರದು. ಹತ್ತಿರದ ಸರಕಾರಿ ಆಸ್ಪತ್ರೆ ಹಾಗೂ ಆಶಾ ಕಾರ್ಯಕರ್ತೆ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳನ್ನಾಗಲಿ, ಆರೋಗ್ಯ ಸಿಬ್ಬಂದಿಗಳನ್ನು ಭೇಟಿ ಮಾಡಲು ತಿಳಿಸಿದರು.

ನಮ್ಮ ಕ್ಲಿನಿಕ್ ವೈದ್ಯಾಧಿಕಾರಿಗಳಾದ ಡಾ॥ಅಕ್ಷತಾ ಇವರು ತಾಯಿಯ ಎದೆ ಹಾಲಿನ ಮಹತ್ವದ ಬಗ್ಗೆ ಹಾಗೂ ಮಕ್ಕಳ ಆರೈಕೆ ಕು–ರಿತು ವಿವರವಾಗಿ ಮಾತನಾಡಿದರು. ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಾಥ–ಮಿಕ ಆರೋಗ್ಯ ಸುಕರ್ಷಾಧಿಕಾರಿ ಸವಿತಾ ಇವರು ಒಆರ್‌ಎಸ್ ದ್ರಾವಣ ತಯಾ–ರಿಸುವ ಮತ್ತು ಉಪಯೋಗಿಸುವ ಬಗ್ಗೆ ಪ್ರಾತ್ಯಕ್ಷಿಕೆ ತೋರಿಸಿದರು. ಕಾರ್ಯಕ್ರಮದಲ್ಲಿ ತಾಲೂಕಾ ಆರೋಗ್ಯಾಧಿಕಾರಿಗಳಾದ ಡಾ॥ ರಾಮಾಂಜನೇಯ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಗಳಾದ ಡಾ॥ ಮಹೇಶ ಉಮಚಗಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶಿವಾನಂದ ಪ್ಲಿ.ಪಿ, ಜಿಲ್ಲಾ ಕಾರ್ಯಕ್ರಮ ಸಲಹೆಗಾರರಾದ ಜೈಹಿಂದ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, ಶುಶ್ರೂಷಣಾಧಿಕಾ–ರಿಗಳು, ಆಶಾ/ಅಂಗನವಾಡಿ ಕಾರ್ಯಕರ್ತೆಯರು, ಗರ್ಭಿಣಿಯರು, ಬಾಣಂತಿಯರು, ತಾಯಂದಿರು ಮತ್ತು ನಮ್ಮ ಕ್ಲಿನಿಕ್/ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು, ನಾಗರೀಕರು ಭಾಗವಹಿಸಿದ್ದರು.

# ಖಾನ್ ಕ್ಯಾಟರಿಂಗ್ ಸರ್ವಿಸ್‌ನ ಪ್ರೊಪ್ರೈಟರ್ ಅಕ್ರಮ್ ಖಾನ್, ರೇಷ್ಮಾ ದಂಪತಿಗಳಿಗೆ ಸನ್ಮಾನ



**ಕೊಪ್ಪಳ :** ಕೊಪ್ಪಳದ ಹಿರಿಯ ನಿವಾಸಿ ಉದ್ಯಮಿ ಹಾಲಿ ವಸತಿ ಮೈಸೂರಿನ ತಾಹಿರ್ ಅಲಿ ಅವರ, ಸುಪುತ್ರಿ ಡಾ, ಸಭಾ ತರುಮೀನ್ ಮತ್ತು ಡಾ, ಮುನಾಫ್ ರವರ ಮದುವೆ ಸಮಾರಂಭದಲ್ಲಿ ನಾನ್ ವೆಜ್ ಕ್ಯಾಟ–ರಿಂಗ್ ಊಟದ ವ್ಯವಸ್ಥೆ ಅಚ್ಚುಕಟ್ಟಾಗಿ ನಿರ್ವಹಿಸಿದ ಮೈಸೂರಿನ ಖಾನ್ ಕ್ಯಾಟರಿಂಗ್ ನ ಪ್ರೊಪ್ರೈಟರ್ ಅಕ್ರಮ ಖಾನ್ ಮತ್ತು ಅವರ ಪತ್ನಿ ರೇಷ್ಮಾ ಖಾನಂ ದಂಪತಿಗಳಿಗೆ ಮಂಗಳವಾರದಂದು ಮೈಸೂ–ರಿನ ತಾಹಿರ ಆಲಿ ಅವರ ನಿವಾಸದಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು,

ಈ ಸಂದರ್ಭದಲ್ಲಿ ತಾಹಿರ್ ಅಲಿ ಮಾತನಾಡಿ ಯೋಗ್ಯ ಬೆಲೆಯಲ್ಲಿ ಉತ್ತಮ ಗುಣಮಟ್ಟದ ನಾನ್ ವೆಜ್ ಊಟದ ಕ್ಯಾಟರಿಂಗ್ ಸೇವೆಗೆ ಅಕ್ರಂ ಖಾನ್ ಇವರ ಖಾನ್ ಕ್ಯಾಟರಿಂಗ್ ಸರ್ವಿಸ್ ಗೆ ಸಂಪರ್ಕಿಸಬಹುದು, ನನ್ನ ಮಗಳ ಮದುವೆ ಸಮಾರಂಭಕ್ಕೆ ಬಂದಿದ್ದ ಗಣ್ಯರು ಊಟ ಸೇವಿಸಿ ತಮ್ಮ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಹೀಗಾಗಿ ಅವರ ಒಳ್ಳೆಯ ಸೇವೆಗೆ ನನ್ನ ಕುಟುಂಬದ ಪರವಾಗಿ ಅವರನ್ನು ಅಭಿನಂದಿಸುವುದಾಗಿ ತಿಳಿಸಿದರು, ಇದೇ ವೇಳೆ ತಾಹಿರ್ ಅಲಿ ಅವರ ಪತ್ನಿ ಯಾಸ್ಮಿನ್ ಬೇಗಂ ಸೇರಿದಂತೆ ಅನೇಕರು ಉಪಸ್ಥಿತ–ರಿದ್ದರು.

# ಬಲ್ಡೋಟಾ ಬೇಕಿಲ್ಲ; ಯಾವುದೇ ಕಾರಣಕ್ಕೂ ಹೋರಾಟ ನಿಲ್ಲಲ್ಲ: ಹಿಟ್ನಾಳ ಸ್ಪಷ್ಟನೆ



**ಕೊಪ್ಪಳ :** ನಗರದ ಪಕ್ಕದಲ್ಲಿಯೇ ಬಲ್ಡೋಟಾದಂತಹ ಬೃಹತ್ ಕಾರ್ಖಾನೆ ಮತ್ತು ಹಲವು ಹಳ್ಳಿಗಳಿಗೆ ಹೊಂದಿಕೊಂಡಿರುವ ಕಿರ್ಲೋಸ್ಕರ್ ಸೇರಿ ವಿವಿಧ ಕಾರ್ಖಾನೆಗಳ ವಿಸ್ತರಣೆ ವಿರೋಧಿಸಿ ಜಿಲ್ಲೆಯ ಜನಪ್ರತಿನಿಧಿಗಳ ಭೇಟಿ ಮಾಡುವ ಸಭೆಯಲ್ಲಿ ಸಂಸದ ಕೆ. ರಾಜಶೇಖರ ಹಿಟ್ನಾಳ ಮಾತನಾಡಿದರು.

ನಗರದ ಪ್ರವಾಸಿ ಮಂದಿರ(ಐಬಿ)ದಲ್ಲಿ ಜಂಟಿ ಕ್ರಿಯಾ ವೇದಿಕೆ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿದ ಅವರು, ಹೋರಾಟಗಾರರಿಗೆ ಸ್ಪಷ್ಟ ಸಂದೇಶ ನೀಡಿ, ಯಾವುದೇ ಕಾರಣ–ಕ್ಕೂ ಎಂತಹ ಬೆಲೆ ತೆತ್ತಾದರೂ ಸರಿ ನಮಗೆ ಕಾರ್ಖಾನೆ ಬೇಡ, ಹೋರಾಟದ ಪರವಾಗಿ ಇದ್ದು, ಶಾಸಕರು ಸೇರಿದಂತೆ ಎಲ್ಲರ ಬೆಂಬಲ ಪಡೆದು ಅಗತ್ಯಬಿದ್ದರೆ ಇನ್ನೊಂದು ಬೃಹತ್ ಹೋರಾಟ ಮಾಡೋಣ, ಅದಕ್ಕೂ ಮೊದಲ ಸರಕಾರದ ಸಚಿವರನ್ನು ಭೇಟಿ ಮಾಡಿ ಮಾಹಿತಿ ಪಡೆದುಕೊಂಡು ಹೇಳುತ್ತೇವೆ ಎಂದರು.

ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಮತ್ತು ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆ ಮತ್ತು ಇಲ್ಲಿನ ವಕೀಲರು ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ,

ಅವರೆಲ್ಲರಿಗೂ ನ್ಯಾಯ ಸಿಗುತ್ತದೆ, ನಾವು ಇಲ್ಲಿ ನೆಮ್ಮದಿಯ ಜೀವನ ನಡೆಸಬೇಕಿದೆ, ಉಳಿದ ಹಲವು ಜಿಲ್ಲೆಗಳಿಗೆ ಹೋಲಿಸಿದರೆ ನಮ್ಮ ಆಯುಷ್ಯವೇ ಕಮ್ಮಿ ಆಗಿದೆ, ಹಲವು ರೋಗಗಳು ಬಂದಿವೆ ಎಂದು ಆತಂಕ ವ್ಯಕ್ತಪಡಿಸಿದ ಅವರು ಕಾರ್ಖಾನೆ ವಿರುದ್ಧ ಗಟ್ಟಿಯಾಗಿ ನಿಂತಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಈ ವೇಳೆ ಮಾತನಾಡಿದ ಹಲವು ಮುಖಂಡರು, ಕಾರ್ಖಾನೆಗಳು ಅನೇಕ ನಿಯಮವನ್ನು ಮೀರಿ ಲಕ್ಷಾಂತರ ಜನ–ರಿಗೆ ಸಮಸ್ಯೆ ಮಾಡಿರುವದನ್ನು ಮತ್ತು ಅದರಿಂದ ಆಗಿರುವ ಪರಿಸರದ ನಾಶ, ವಾಯು ಶುದ್ಧತೆಯ ನಾಶ, ನೀರಿನ ಸಮಸ್ಯೆ, ಅಂತರ್ಜಲ ಸಮಸ್ಯೆ, ಆರೋಗ್ಯ ಸಮಸ್ಯೆ ಪರಿಗಣಿಸಿ ಸರಕಾರ ವಿಸ್ತರಣೆ ಅನುಮತಿ ವಾಪಸ್ ಪಡೆಯಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಮತ್ತು ಪರಿಸರ ಹಿತರಕ್ಷಣಾ ವೇದಿಕೆಯ ಪ್ರಮುಖರುಗಳಾದ ಪ್ರೊ. ಅಲ್ಲಮಪ್ರಭು ಬೆಟ್ಟದೂರು, ಬಸವರಾಜ ಶೀಲವಂತರ, ಕೆ. ಬಿ. ಗೋನಾಳ, ಮಹಾಂತೇಶ ಕೊತಬಾಳ, ಸೋಮರಡ್ಡಿ ಅಳವಂಡಿ, ಮಂಜುನಾಥ ಜಿ. ಗೊಂಡಬಾಳ, ರಾಜು ಬಾಕಳೆ, ಡಿ. ಎಂ. ಬಡಿಗೇರ, ಶರಣು ಗಡ್ಡಿ, ಡಾ. ಮಂಜುನಾಥ ಸಜ್ಜನ್, ಶರಣು ಶೆಟ್ಟರ್, ಮುದುಕಪ್ಪ ಹೊಸಮನಿ, ಶರಣು ಪಾಟೀಲ್, ಎಸ್. ಎ. ಗಫಾರ್, ಗವಿಸಿದ್ದಪ್ಪ ಹಲಗಿ, ಹನುಮಂತಪ್ಪ ಗೊಂದಿ, ಮಲ್ಲಪ್ಪ ಬಂಡಿ, ಶಾಂತಪ್ಪ ಅಂಗಡಿ ಇತರರು ಇದ್ದರು. ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಅವರ ಭೇಟಿ ಜೂನ್ 23, 24 ರಂದು ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಅವರ ಭೇಟಿ ನಿಗದಿ ಮಾಡಲಾಗಿದೆ.

# ಶುಲ್ಕ ಮರುಪಾವತಿ ಕಾರ್ಯಕ್ರಮ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಕೊಪ್ಪಳ :** ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಒದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು, 2024–25 ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ಶುಲ್ಕ ಮರುಪಾವತಿ ಕಾರ್ಯಕ್ರಮಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಅವಧಿಯನ್ನು ಜೂನ್ 30 ರವರೆಗೆ ವಿಸ್ತರಿಸಲಾಗಿದೆ. ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ಮನವಿ ಮೇರೆಗೆ ಹೈಕೋರ್ಟ್ ಮಧ್ಯಂತರ ಆದೇಶದಂತೆ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಕೋರ್ಸುಗಳಿಗೆ ಶುಲ್ಕ ಮರುಪಾವತಿ ಕಾರ್ಯಕ್ರಮಕ್ಕೆ ಮಾತ್ರ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸಲಾಗಿದೆ. ಅರ್ಜಿಯನ್ನು https://ssp.postmatric.karnataka.gov.in ಮೂಲಕ ಸಲ್ಲಿಸಬೇಕು. ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನ್ನೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ವೆಬ್‌ಸೈಟ್ https://bcwd.karnataka.gov.in ಭೇಟಿ ನೀಡಬಹುದು, ಇಲಾಖಾ ಸಹಾಯವಾಣಿ: 8050770005, ಇ–ಮೇಲ್: bcwdhelpline@gmail.com, ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇಮೇಲ್: postmatrichelp@karnataka.gov.in ಮತ್ತು ದೂ.ಸಂ: 1902 ಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬೌದ್ಧಿಕ ಆಸ್ತಿ ಹಕ್ಕುಗಳ ರಕ್ಷಣೆ ಅತ್ಯಂತ ಮುಖ್ಯ: ಡಾ. ಸತೀಶ ಡಿ.



**ಬಾಗಲಕೋಟೆ :** ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳನ್ನು ಅರ್ಥ–ಮಾಡಿಕೊಳ್ಳುವುದು ಮತ್ತು ರಕ್ಷಿಸುವುದು ಅತ್ಯಂತಮುಖ್ಯವಾಗಿದೆಎಂದುತೋಟಗಾ–ರಿಗಾಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಜೈವಿಕ ತಂತ್ರಜ್ಞಾನ ಮತ್ತು ಬೆಳೆ ಸುಧಾರಣೆ ವಿಭಾಗದ ಸಹ ಪ್ರಾಧ್ಯಾಪಕ ಡಾ.ಸತೀಶ ಡಿ ಹೇಳಿದರು.

ನಗರದ ಬಿ.ವಿ.ವಿ.ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡ "ಬೌದ್ಧಿಕ ಆಸ್ತಿ ಹಕ್ಕುಗಳಲ್ಲಿ ಉದಯೋನ್ಮುಖ ಪ್ರವೃತ್ತಿಗಳು" ಕುರಿತು ಒಂದು ದಿನದ ರಾಜ್ಯದ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಬೌದ್ಧಿಕ ಆಸ್ತಿಗಳ ಹಕ್ಕುಗಳ ಅವಲೋಕನ ಕುರಿತು ಮಾತನಾಡಿದ ಅವರು ಬೌದ್ಧಿಕ ಆಸ್ತಿಗಳು ಎಂದರೆ ಮಾನವನ ಬುದ್ದಿಶಕ್ತಿಯಿಂದ ರಚಿಸಲ್ಪಟ್ಟ ವಸ್ತುಗಳ ಮೇಲೆ ಸೃಷ್ಟಿಕರ್ತರಿಗೆ ನೀಡಲಾದ ಹಕ್ಕುಗಳು, ಈ ಹಕ್ಕುಗಳು ಸೃಷ್ಟಿಕರ್ತರಿಗೆ ಅವರ ಸೃಷ್ಟಿಯಾದ ವಸ್ತುಗಳನ್ನು ನಿರ್ದಿಷ್ಟ ಸಮಯದವರೆಗೆ ಬಳಸಲು, ಮಾರಾಟ ಮಾಡಲು ಮತ್ತು ಲಾಭ ಪಡೆಯಲು ಹಕ್ಕುಗಳನ್ನು ನೀಡಲಾಗಿರುತ್ತದೆ. ಪೇಟೆಂಟ್ ಎನ್ನುವುದು ಹೊಸ ಸಂಶೋಧನೆ ಅಥ–ವಾ ಅವಿಷ್ಕಾರಕ್ಕಾಗಿ ನೀಡಲಾದ ವಿಶೇಷ ಹಕ್ಕು. ಉತ್ಪನ್ನಗಳನ್ನು ತಯಾರಿಸಲು ಹೊಸ ಮಾರ್ಗ ತೋರುವ ಮತ್ತು ವೈಜ್ಞಾನಿಕ, ತಾಂತ್ರಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸುವ ಕ್ರಿಯೆಯಾಗಿದೆ. ಲೇಖಕರು, ಕಲಾವಿದರು ಮತ್ತು ಇತರ ಸೃಷ್ಟಿಕರ್ತರಿಗೆ ಅವರ ಸಾಹಿತ್ಯಿಕ ಮತ್ತು ಕಲಾತ್ಮಕ ಸೃಷ್ಟಿಗಳಿಗೆ ರಕ್ಷಣೆ ನೀಡುತ್ತದೆ. ದೇಶಗಳು ಬೌದ್ಧಿಕ ಆಸ್ತಿಯನ್ನು ರಕ್ಷಿಸಲು ಕಾನೂನುಗಳನ್ನು ಜಾರಿಗೆ ತಂದಿವೆ. ಈ ಕಾನೂನುಗಳು ಬೌದ್ಧಿಕ ಸರಕುಗಳು ಮತ್ತು ಸೇವೆಗಳ ಸೃಷ್ಟಿಕರ್ತರನ್ನು ರಕ್ಷಿಸುತ್ತಿದ್ದರೂ, ನಿರ್ಣಾಯಕ ತಂತ್ರಜ್ಞಾನಗಳು ಮತ್ತು ಸಂಪನ್ಮೂಲಗಳಿಗೆ ಪ್ರವೇಶದ ವಿಷಯದಲ್ಲಿ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ರಾಷ್ಟಗಳ ನಡುವಿನ ಅಂತರವನ್ನು ಸಹ ಅವು ವ್ಯಕ್ತಪಡಿಸುತ್ತವೆ. ಬೌದ್ಧಿಕ ಆಸ್ತಿ ಹಕ್ಕುಗಳು ಐಪಿಆರ್ ಕಂಪನಿಯ ಮೌಲ್ಯಗಳು ಹೆಚ್ಚುತ್ತಿರುವ ಪ್ರಮುಖ ಭಾಗವಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳು ಜ್ಞಾನ ಆಧಾರಿತ ಆರ್ಥಿಕತೆಗಳಿಗೆ ಚಲಿಸುತ್ತಿದ್ದಂತೆ, ಐಪಿಆರ್‌ನ ರಕ್ಷಣೆ ಹೆಚ್ಚು ಕಷ್ಟಕರ ಮತ್ತು ಹೆಚ್ಚು ಮುಖ್ಯವಾಗುತ್ತದೆ. ವಿಶೇಷವಾಗಿ ಹೆಚ್ಚು ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ, ಜಾಗತಿಕ ಮಾರುಕಟ್ಟೆಯಲ್ಲಿ, ಐಪಿಆರ್‌ನ ಅಂತರರಾಷ್ಟ್ರೀಯರಕ್ಷಣೆಸಂಕೀರ್ಣವಾಗಿದೆ ಎಂದರು.

ಇನ್ನೋರ್ವ ಮುಖ್ಯ ಅತಿಥಿಗಳಾದ ಬಸವೇಶ್ವರ ಇಂಜನೀಯರಿಂಗ್ ಕಾಲೇಜಿನ ಮಾನವಶಾಸ್ತ್ರ ಮತ್ತು ಸಮಾಜ ವಿಜ್ಞಾನಗಳ ವಿಭಾಗದ ಮುಖ್ಯಸ್ಥೆಯಾದ ಡಾ. ಬಸವರಾಜೇಶ್ವರಿ ಹೊಕ್ರಾಣಿ ಮಾತನಾಡಿ ಜಗತ್ತಿನ ಲಕ್ಷಾಂತರ ಸಂಶೋಧಕರು ಜೀವನದಲ್ಲಿ ಸಂತೋಷ ಮತ್ತು ಗುಣಾತ್ಮಕ ಬದಲಾವಣೆ ಮಾಡಿರುವ ಬಹುಕೋಟಿ ಡಾಲರ್ ಚಿತ್ರೋದ್ಯಮದ ರೆಕಾರ್ಡಿಂಗ್, ಪ್ರಕಾಶನ, ಸಾಫ್ಟವೇರ್, ಉದ್ಯಮಗಳಿಗೆ ಕೃತಿಸ್ವಾಮ್ಯದ ರಕ್ಷಣೆ ಇಲ್ಲದೆ ಇದ್ದರೆ ಅವುಗಳ ಬೆಳವಣಿಗೆ ಕಷ್ಟಸಾಧ್ಯ ಗ್ರಾಹಕರು ಯಾವುದೆ ವಸ್ತುಗಳನ್ನು ವಿಶ್ವಾಸಾರ್ಹತೆಯಿಂದ ಕೊಳ್ಳಲು ಟ್ರೇಡ್‌ಮಾರ್ಕ ಸಹಾಯಕ್ಕೆ ಬರುತ್ತದೆ, ಬೌದ್ಧಿಕ ಆಸ್ತಿಯ ರಕ್ಷಣೆ ನಕಲಿ ಮತ್ತು ಇತರ ಕಳಪೆ ಗುಣಮಟ್ಟದ ವಸ್ತುಗಳ ಉತ್ಪಾದನೆಗೆ ಕಡಿವಾಣ ಹಾಕುತ್ತದೆ, ದೇಶದ ಪ್ರಗತಿ, ಹೊಸ ಕೈಗಾರಿಕೆ, ತಯಾ–ರಿಕೆ ಸಂಸ್ಥೆಗಳ ಸ್ಥಾಪನೆ, ಉದ್ಯೋಗ ಸೃಷ್ಟಿಗೆ ಕಾರಣವಾಗುವುದರ ಮೂಲಕ ಜನರ ಜೀವನ ಗುಣಮಟ್ಟವನ್ನು ಉತ್ತಮಪಡಿಸಲು ಐಪಿಆರ್ ಸಹಾಯವಾಗುತ್ತದೆ ಎಂದರು.

ಕಾರ್ಯಾಗಾರದ ಅಧ್ಯಕ್ಷತೆಯನ್ನು ವಹಿಸಿದ ಪ್ರಾಚಾರ್ಯ ಶ್ರೀಮತಿ ಎಸ್. ಆರ್.ಸಬರದ ಅವರು ಮಾತನಾಡಿ ಅವರು ಈ ಹಕ್ಕುಗಳನ್ನು ಅರ್ಥಮಾಡಿಕೊಳ್ಳಲು ಸಂಶೋಧನೆಯ ಅಗತ್ಯತೆಯ ನಾವಿನ್ಯತೆ ಮುಖ್ಯವಾಗಿದ್ದು, ಇತರರ ಹಕ್ಕುಗಳನ್ನು ಗೌರವಿಸುವಾಗ ಒಬ್ಬರ ಸ್ವಂತ ಹಕ್ಕುಗಳ ಬಗ್ಗೆ ತಿಳಿದಿರುವ ಪ್ರಾಮುಖ್ಯತೆ ಇರುವುದ–ರಿಂದ ಕಾಲೇಜಿನಿಂದ ಈ ಕಾರ್ಯಾಗಾರ ಹಮ್ಮಿಕೊಂಡಿದೆ ಎಂದರು.

ಐಕ್ಯೂಎಸಿ ಸಂಯೋಜಕ ಡಾ.ಡಿ. ಎಸ್.ಲಮಾನಿ ಪ್ರಸ್ತಾವಿಕ ಮಾತನಾಡಿದರು. ವಿದ್ಯಾರ್ಥಿಗಳ ಕಲ್ಯಾಣಾಧಿಕಾರಿ ಶ್ರೀಮತಿ ಡಾ.ಎಸ್.ಆರ್.ಕಲಾದಗಿ ಸ್ವಾಗತಿಸಿದರು, ಕುಮಾರಿ ಸಹನಾ ಪ್ರಾರ್ಥಿಸಿದರೆ, ಡಾ.ಡಿ.ಎಸ್ ಲಮಾಣಿ ಪ್ರಸ್ತಾವಿಕ ಮಾತನಾಡಿದರು, ಡಾ.ಪ್ರತಿಭಾ ಕಣವಿ ಕಾರ್ಯಕ್ರಮ ನಿರೂಪಿಸಿದರು, ಡಾ.ಜಯಶ್ರೀ ಉಪ್ಪಿನ ವಂದಿಸಿದರು. ಹಳೇ ವಿದ್ಯಾರ್ಥಿ ಸಂಘದ ಡಾ. ಗಿರೀಶ ಹಾಗೂ ಸ್ನಾತಕೋತ್ತರ ವಿಭಾಗದ ಸಂಯೋಜ–ಕರಾದ ಡಾ. ದೇಸಾಯಿ ವೇದಿಕೆಯಲ್ಲಿದ್ದರು. ಕಾರ್ಯಾಗಾರದಲ್ಲಿ ವಿವಿಧ ಜಿಲ್ಲೆಗಳಿಂದ ನೂರಾರು ಶಿಬಿರಾರ್ಥಿಗಳು, ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಭಾಗವಹಿಸಿದ್ದರು.

# ಸರ್ಕಾರದ ವಸತಿ ಯೋಜನೆಯಲ್ಲಿ ಅಲ್ಪಸಂಖ್ಯಾತರಿಗೆ ಶೇ. 15% ಮೀಸಲು ಸ್ವಾಗತಾರ್ಹ: ಕಲಬುರ್ಗಿ



**ಇಲಕಲ್ಲ :** ಕರ್ನಾಟಕ ಸರ್ಕಾರವು ಸರ್ಕಾರದವಸತಿಯೋಜನೆಗಳಲ್ಲಿ ಶೇ. 15% ಅಲ್ಪಸಂಖ್ಯಾತ ಮೀಸಲು ಯೋಜನೆ ಜಾರಿಗೆ ತಂದಿರುವುದು ಮುಸ್ಲಿಂ, ಜೈನ್, ಶಿಖ್, ಫಾರ್ಸಿ ಮತ್ತು ಕ್ರಿಶ್ಚಿಯನ್ ಸಮುದಾಯದ ಜನರಿಗೆ ಅನುಕೂಲವಾಗಲಿದೆ ಸರ್ಕಾರದ ಈ ನಡೆ ಸ್ವಾಗತಾರ್ಹವಾಗಿದೆ ಎಂದು ಕೆ.ಎಂ.ಯೂ ರಾಜ್ಯಾಧ್ಯಕ್ಷ ಜಬ್ಬಾರ ಕಲಬುರ್ಗಿ ಅವರಿಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ರಾಜ್ಯದಲ್ಲಿಬಿಜೆಪಿಯವರುಮುಸ್ಲಿಂ ಹೆಸರು ಬಂದಾಕ್ಷಣ ತುಷ್ಟಿಕರಣ ಎಂದು ಬೊಬ್ಬೆ ಹೊಡೆಯುತ್ತಾರೆ ಆಡಳಿತದಲ್ಲಿರುವ ಸರ್ಕಾರ ಸಾಮಾಜಿಕ ನ್ಯಾಯ ನೀಡುವುದು ತಪ್ಪಾ? ಎಂದು ಪ್ರಶ್ನಿಸಿದರು.

ಅಲ್ಪಸಂಖ್ಯಾತರಿಗೆ ಸರಿಯಾದ ವಸತಿ ಸೌಲಭ್ಯದ ಕೊರತೆ ಪರಿಗಣಿಸಿಯೇ ಈ ತಿರ್ಮಾನ ಕೈಗೊಳ್ಳಲಾಗಿದ್ದರು, ಕೋಮುವಾದಿಗಳಿಗೆ ಇದೊಂದು ತುಷ್ಠಿಕರಣ ವಷ್ಟೇ? ಧರ್ಮಾಧಾ–ರಿತ ಮೀಸಲಾತಿ ನೀಡಲು ಸಂವಿಧಾನದಲ್ಲಿ ಅವಕಾಶ ಇಲ್ಲ ವೆಂಬುದು ಮನವ–ರಿಕೆ ಇದ್ದವರೆ ಯೋಜನೆಗಳನ್ನು ರೂಪಿಸಿರುತ್ತಾರೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ, ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಸಂಸ್ಥೆಗಳು ವರ್ಗ ಆಧಾರಿತವಾಗಿ ವಿಂಗಡಿಸಲ್ಪಟ್ಟ ಜಾತಿಗಳ ದತ್ತಾಂಶಗಳ ಆದ–ಾರದಲ್ಲೇ ಅಲ್ಪಸಂಖ್ಯಾತರಿಗೆ ವಸತಿ ಯೋಜನೆಯಲ್ಲಿ ಶೇ. 15% ಮೀಸಲು ನೀಡಿದೆ ಎಂದು ಸಮರ್ಥಿಸಿಕೊಂಡರು.

ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿವಿರುವ ಅಲ್ಪಸಂಖ್ಯಾತರ ಸ್ಥಿತಿಗತಿ ಸುಧಾರಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ ಅಸಮಾನತೆ ಸಮಸ್ಯ ಪರಿಹರಿಸಲು ಸರ್ಕಾರ 2ಬಿ ಮೀಸಲಾತಿ ಪುನಃ ಸ್ಥಾಪನೆಗೆ ಕ್ರಮ ಕೈಗೊಂಡಿರುವಂತೆ ಗುತ್ತಿಗೆ ಮತ್ತು ಖರೀದಿಯಲ್ಲಿ ಮೀಸಲು ನೀಡಿದೆ ಧರ್ಮ–ಜಾತಿಗಳಲ್ಲಿ ದ್ವೇಶ ಬಿತ್ತುವ ಕೋಮುವಾದಿಗಳು ಇದನ್ನು ತಡೆಯಲು ನ್ಯಾಯಾಲಯದ ಮೊರೆ ಹೋಗಿದ್ದಾರೆ. ಮಧ್ಯಂತರ ತಡೆ ಆಜ್ಞೆ ಇದೆ ಆಯೋಗಗಳ ವರದಿ ಆಧರಿಸಿ ವರ್ಗ ಆಧಾ–ರಿತವಾಗಿ ನ್ಯಾಯಾಲಯದಲ್ಲ ಮೀಸಲಾತಿಗೆ ಗೆಲವು ಸಿಗಲಿದೆ ಎಂದು ಭರವಸೆ ವ್ಯಕ್ತ ಪಡಿಸಿದರು. ಡಾ। ರಾಜೇಂದ್ರ ಸಾಚಾರ ವರದಿ ಆಧರಿಸಿ ಸುಮಾರು 72 ವಿಷಯಗಳಲ್ಲಿ ಪ್ರಾತಿನಿಧ್ಯ ನೀಡಲು ಭಾರತ ಸರ್ಕಾರ ಒಪ್ಪಿದೆ ಅದರಲ್ಲಿ ವಸತಿ ಯೋಜನೆಯು ಒಂದಾಗಿದೆ ಮೀಸಲು ಹೆಚ್ಚಿಸಲು ಪ್ರಧಾನ ಮಂತ್ರಿಗಳ 15 ಅಂಶ ಕಾರ್ಯಕ್ರಮ ಜಾರಿಯಲ್ಲಿ ಇದೆ ಅದರಂತೆ 2011 ರ ಜಾತಿಸಗಣತಿ ದತ್ತಾಂಶ ಪರಿಗಣಿಸಿ ವರ್ಗ ಆದ–ಾರಿತ ಮಿಸಲಾತಿ ಹೆಚ್ಚಳ ಮಾಡಿದೆ ರಾಜ್ಯದಲ್ಲಿರುವ ಮೀಸಲಾತಿ ತಾರತಮ್ಯ ಪರಿಹರಿಸುವ ನಟ್ಟಿನಲ್ಲಿ ಸರ್ಕಾರ ದಿಟ್ಟ ಹೆಜ್ಜೇ ಇಟ್ಟಿದೆ ಎಂದು ಕೆ.ಎಂ.ಯೊ ಶ್ಲಾಘೀಸಿದೆ.

# ಉಚಿತ ಯೋಗ ತರಬೇತಿಯ ಮಾದರಿ ಯೋಗಪಟು ಶಿವಕುಮಾರ ಪಾಟೀಲ

**ವರದಿ: ಚಂದ್ರಶೇಖರ ಮೋರೆ.**

**ಮಹಾಲಿಂಗಪುರ :** ಪಟ್ಟಣದ ಬುದ್ನಿ ಪಿ.ಡಿ. ಬಡಾವಣೆಯ ಶಿವಕುಮಾರ ಪಾಟೀಲ ಎಂಬ ಯೋಗಪಟು ಕಳೆದ 8–9 ವರ್ಷಗಳಿಂದ ಸದ್ದಿಲ್ಲದೇ ಯೋಗ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಇಂದು ಮಾದರಿ ಯೋಗ ಸಾಧಕರಾಗಿ ಹೊರಹೊಮ್ಮಿದ್ದಾರೆ.

**ಕಿರು ಪರಿಚಯ :**

ರೈತಕುಟುಂಬದ ಅರ್ಜುನಗೌಡ–ಮಹಾದೇವಿ ಪಾಟೀಲ ದಂಪತಿಗಳ ಜೇಷ್ಠ ಪುತ್ರನಾಗಿ 1978 ರ ಜುಲೈ 7 ರಂದು ಜನಿಸಿದ ಶಿವಕುಮಾರ ಪಾಟೀಲ ಅವರು ಬಿ.ಎ. ಪದವೀಧರರು. ಪತ್ನಿ, ಇಬ್ಬರು ಸುಪುತ್ರಿಯರು, ಸುಪುತ್ರನೊಂದಿಗೆ ಒಕ್ಕಲುತನದ ಕಾಯಕದೊಂದಿಗೆ ಸುಖಿ ಜೀವನ ನಡೆಸುತ್ತಿದ್ದಾರೆ.

**ಎಸ್‌ಎಸ್ವೈ ಶಿಬಿರದಿಂದ ಪ್ರೇರಣೆ :**

ಕೃಷಿ ಕಾಯಕದ ಜೊತೆಗೆ ಎಸ್‌ಎಸ್ವೈ ಶಿಬಿರದಲ್ಲಿ ಭಾಗವಹಿಸಿದ ನಂತರ ಯೋಗದತ್ತ ಆಕರ್ಷಿತರಾದ ಇವರು ಜಮಖಂಡಿಯ ಅರುಣ ಗುರೂಜಿ ಅವರ ಮಾರ್ಗದರ್ಶನದಲ್ಲಿ ಯೋಗ ಸಾಧನೆ ಪ್ರಾರಂಭಿಸಿ, ಇಂದು





ಯೋಗದ ಪ್ರತಿಯೊಂದು ಆಸನಗಳನ್ನು ನೀರು ಕುಡಿದಷ್ಟೇ ಸರಳವಾಗಿ ಮಾಡುತ್ತಾ, ನೂರಾರು ಜನರಿಗೆ ಯೋಗ ಮಾರ್ಗದರ್ಶಕರಾಗಿ ಯೋಗದಲ್ಲಿ ನಿತ್ಯ ನೂತನ ನೈಪುಣ್ಯತೆಯನ್ನು ಸಾಧಿಸುತ್ತಿದ್ದಾರೆ.

**ನಾಲ್ಕು ವರ್ಷಗಳಿಂದ ನಿತ್ಯಯೋಗ :**

ಯೋಗದ ಕುರಿತು ಆಸಕ್ತಿಯುಳ್ಳ ಸುಮಾರು 80 ಜನರನ್ನು ಒಳಗೊಂಡ ಎಸ್‌ಎಸ್ವೈ ಯೋಗ ಟೀಮ್ ಎಪಿಎಂಸಿ ಮಹಾಲಿಂಗಪುರ ಎಂಬ ಹೆಸರಿನಲ್ಲಿ ಒಂದು ತಂಡ ಕಟ್ಟಿಕೊಂಡು, ಕಳೆದ ನಾಲ್ಕು ವರ್ಷಗಳಿಂದ ಪ್ರತಿನಿತ್ಯ ಮುಂಜಾನೆ 5–30 ರಿಂದ 7–30 ವರೆಗೆ ಪಟ್ಟಣದ ಎಪಿಎಂಸಿ ಗಣಪತಿ ದೇವಸ್ಥಾನದ ಆವರಣದಲ್ಲಿ ನಿರಂತರವಾಗಿ ಉಚಿತ ಯೋಗ ತರಬೇತಿ ಶಿಬಿರ ನಡೆಸುತ್ತಿದ್ದಾರೆ. ಏನೇ ತೊಂದರೆ ಬಂದರೂ ಸಹ ಎಂಭತ್ತು ಸದಸ್ಯರಲ್ಲಿ ಎಷ್ಟೇ ಜನ ಬಂದರೂ ಸಹ ನಿತ್ಯ ತಪ್ಪದೇ ಯೋಗ ಶಿಬಿರ ನಡೆಸಿಕೊಂಡು ಬರುತ್ತಿದ್ದಾರೆ.

**ವಿವಿಧೆಡೆ ಯೋಗ ತರಬೇತಿ :**

ಪ್ರತಿನಿತ್ಯ ಎಪಿಎಂಸಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಉಚಿತವಾಗಿ ಯೋಗ ತರಬೇತಿ ಶಿಬಿರ ನಡೆಸುತ್ತಿರುವ ಶಿವಕುಮಾರ ಅವರು ದೂರದ ಹುಬ್ಬಳ್ಳಿ, ನೆರೆಯ ಚಿಮ್ಮಡ, ಹೊಸೂರ, ಢವಳೇಶ್ವರ, ಬನಹಟ್ಟಿ ಸೇರಿದಂತೆ ಹಲವು ಊರುಗಳ ವಿವಿಧ ಶಾಲೆ, ಕಾಲೇಜುಗಳಲ್ಲಿ ಮಕ್ಕಳಿಗೆ ಮತ್ತು ವಿವಿಧ ಸಂಘಟಕರು ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ಉಚಿತವಾಗಿ ಯೋಗ ಶಿಬಿರವನ್ನು ನಡೆಸಿ ಕೊಟ್ಟಿದ್ದಾರೆ.

**ಶರೀರ, ಮನಸ್ಸು, ಉಸಿರುಗಳ ಸಂಗಮವೇ ಯೋಗ :**

ಶರೀರ, ಮನಸ್ಸು, ಉಸಿರುಗಳ ಸಂಗಮವೇ ಯೋಗವಾಗಿದೆ.

ಯೋಗದಿಂದ ಇವುಗಳ ಶುದ್ಧೀಕರಣದ ಜೊತೆಗೆ ಔಷಧಿ ರಹಿತ ಆರೋಗ್ಯ ಜೀವನಕ್ಕೆ ಸಹಕಾರಿ. ಉತ್ತಮ ಆರೋಗ್ಯ ಮತ್ತು ಶರೀರ ದಂಡನೆಗಾಗಿ ಪ್ರತಿಯೊಬ್ಬರೂ ನಿತ್ಯ ಯೋಗ ಮಾಡಬೇಕು. ಯೋಗದಿಂದ ಶರೀರ, ಮಾನಸಿಕ ಆರೋಗ್ಯದ ಜೊತೆಗೆ ಸಾಮಾಜಿ–ಕ ಸ್ವಾಸ್ಥ್ಯ ಕಾಪಾಡುವಲ್ಲಿ ಯೋಗದ ಪಾತ್ರ ಮಹತ್ವದ್ದಾಗಿದೆ ಎನ್ನುತ್ತಾರೆ ಯೋಗ ಸಾಧಕ ಶಿವಕುಮಾರ.

* * *

## ಯೋಗಕ್ಕಿಂತ ದೊಡ್ಡವರು ಯಾರಿಲ್ಲ

**ಯೋಗವು ನಮ್ಮ ಭಾರತ ದೇಶದ ಸನಾತನ ಶಕ್ತಿಯಾಗಿದ್ದರಿಂದಲೇ ಇಂದು ಪ್ರಪಂಚದ 121 ದೇಶಗಳು ನಮ್ಮ ಯೋಗವನ್ನು ಅಪ್ಪಿಕೊಂಡು, ಒಪ್ಪಿಕೊಂಡು ಯೋಗ ಸಾಧನೆಗೆ ಪ್ರಯತ್ನಿಸುತ್ತಿವೆ. ಸೇವಕನಿಂದ ರಾಜನವರೆಗೆ ಎಲ್ಲರೂ ತಮ್ಮ ಆರೋಗ್ಯ ಸುಧಾರಣೆಗೆ ಯೋಗ ಮಾಡುವುದು ಅತ್ಯವಶ್ಯಕ. ಇಂದಿನ ಯುವಕರು ದುಶ್ಚಟಗಳಿಂದ ದೂರವಿರಲು ಯೋಗ ಶಿಬಿರಗಳಲ್ಲಿ ಹೆಚ್ಚಾಗಿ ಭಾಗವಹಿಸಬೇಕು. ಶಾಲಾ–ಕಾಲೇಜು ಮಕ್ಕಳಿಗೆ ಉಚಿತ ಯೋಗ ತರಬೇತಿ ನೀಡಲು ಸಿದ್ಧನಿದ್ದೇನೆ. ಆದರೆ ಯಾವುದೇ ಶಾಲೆಯ ಶಿಕ್ಷಕರು, ಆಡಳಿತ ಮಂಡಳಿಯವರು ಅದಕ್ಕೆ ಪೂರಕವಾದ ವೇದಿಕೆ–ಅವಕಾಶಗಳನ್ನು ಒದಗಿಸುತ್ತಿಲ್ಲ.**

**। ಶಿವಕುಮಾರ ಅ. ಪಾಟೀಲ.**
**ಉಚಿತ ಯೋಗ ತರಬೇತಿದಾರರು, ಮಹಾಲಿಂಗಪುರ.**

# ಪೇಜಾವರ ಶ್ರೀಗಳ ಪುರಪ್ರವೇಶ: ಗಮನಸೆಳೆದ ಶೋಭಾಯಾತ್ರೆ

**ಬಾಗಲಕೋಟೆ :** ನಗರದಲ್ಲಿ ಎಂಟು ದಿನಗಳ ಕಾಲ ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಶುಕ್ರವಾರ ಮಧ್ಯಾಹ್ನ ನಗರಕ್ಕೆ ಆಗಮಿಸಿದ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರನ್ನು ಶೋಭಾಯಾತ್ರೆ ಮೂಲಕ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ನಗರಕ್ಕೆ ಮಧ್ಯಾಹ್ನ ಶ್ರೀಗಳು ಆಗಮಿಸಿದ ನಂತರ ತೆಗ್ಗಿ ಬಡಾವಣೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿಪ್ರ ಬಂಧುಗಳ ಮನೆಗಳಲ್ಲಿ ಶ್ರೀಗಳ ಪಾದಪೂಜೆಯನ್ನು ನೆರವೇರಿಸಲಾಯಿತು. ನಂತರ ಸಂಜೆ ವಿದ್ಯಾಗಿರಿಯ ಕಾಲೇಜು ವೃತ್ತದಿಂದ ವಿಪ್ರ ಅಭಿವೃದ್ಧಿ ಸಂಘದ ರಾಯರ ಮಠದವರೆಗೆ ಭವ್ಯ ಮೆರವಣಿಗೆ ನಡೆಸಲಾಯಿತು. ಬೆಳ್ಳಿ ಲೇಪಿತ ಸಾರೋಟದಲ್ಲಿ ಶ್ರೀಗಳನ್ನು ಕರೆತರಲಾಯಿತು. ಕರಡಿ ಮಜಲು, ಮಹಿಳಾ ಮಂಡಳಿಗಳ ಭಜನೆ ಮೆರವಣಿಗೆಗೆ ಮೆರಗು ತುಂಬಿತು. ದಾರಿಯುದ್ದಕ್ಕೂ ಪಟಾಕಿಗಳನ್ನು ಸಿಡಿಸಿ ಸಂಭ್ರಮಿಸಲಾಯಿತು.





ಜೂನ್ 21 ರಿಂದ 27 ರವರೆಗೆ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರ ಅರವತ್ತನೇ ವರ್ಧಂತಿ ಉತ್ಸವದ ಪ್ರಯುಕ್ತ ನಿತ್ಯ ಶ್ರೀರಾಮವಿಠ್ಠಲ ದೇವರ ಪೂಜೆ, ಪ್ರವಚನ, ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದ್ದು, ಭಕ್ತರ ಮನೆಗಳಲ್ಲಿ ಪಾದಪೂಜೆಗೂ ವ್ಯವಸ್ಥೆ ಕಲ್ಪಿಸಲಾಗಿದೆ. ಶ್ರೀಗಳ ಆಗಮನದಿಂದ ವಿದ್ಯಾಗಿರಿಯಲ್ಲಿ ಸಂಭ್ರಮದ ವಾತಾವರಣ ಕಂಡು ಬಂದಿದೆ.

ಚತುರ್ವೇದ ಅಧ್ಯಯನ ಮಾಡಿದ ವಿರಳ ಸಂತ: ಮೆರವಣಿಗೆ ನಂತರ ವಿಪ್ರ ಅಭಿವೃದ್ಧಿ ಸಂಘದ ಶ್ರೀರಾಯರ ಮಠದಲ್ಲಿ ಜರುಗಿದ ಸಭಾ ಕಾರ್ಯಕ್ರಮದಲ್ಲಿ ಶ್ರೀಗಳನ್ನು ಸ್ವಾಗತಿಸಿ ಪಂಡಿತ ಆನಂದತೀರ್ಥಾ9ಚಾರ್ಯ ನಾಗಸಂಪಗಿ ಅವರು ಪ್ರವಚನ ನೀಡಿದರು. ನಾಲ್ಕೂ ವೇದಗಳನ್ನು ಶ್ರೀಗಳು ಅಧ್ಯಯನ ಮಾಡಿದ್ದಲ್ಲದೇ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಪಂಡಿತರಿಗೆ ಪಾಠ ಮಾಡಿದ್ದಾರೆ. ನಾಲ್ಕೂ ವೇದಗಳನ್ನು ಅಧ್ಯಯನ ಮಾಡಿರುವ ವಿರಳಾತಿ ವಿರಳರಲ್ಲಿ ಪೇಜಾವರ ಶ್ರೀಗಳು ಒಬ್ಬರು ಎಂದು ಬಣ್ಣಿಸಿದರು.

ಅಯೋಧ್ಯೆ ರಾಮಮಂದಿರದ ನಾಲ್ಕು ದ್ವಾರಗಳಿಗೆ ನಾಮಕರಣ ಮಾಡುವ ಸಂದರ್ಭದಲ್ಲಿ ಶ್ರೀಗಳು ಮಧ್ವಾಚಾರ್ಯರ ಹೆಸರು ಶಿಫಾರಸ್ಸು ಮಾಡಿದರು. ಅದನ್ನು ಎಲ್ಲರೂ ಒಪ್ಪಿದರು. ಶ್ರೀಗಳು ಹೆಚ್ಚಿಗೆ ಮಾತನಾಡುವುದಿಲ್ಲ. ಅವರು ಮಾತನಾಡಿದರೆ ಇಡೀ ಜಗತ್ತೇ ಒಪ್ಪುವಂಥ ಪ್ರಭಾವವನ್ನು ಹೊಂದಿದ್ದಾರೆ ಎಂದು ಹೇಳಿದರು.

ಶ್ರೀಗಳನ್ನು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಭೇಟಿ ಮಾಡಿ ಆಶೀರ್ವಾದ ಪಡೆದರು. ಸಂಜೆ ನಡೆದ ಮೆರವಣಿಗೆಯಲ್ಲಿ ವಿಧಾನ ಪರಿಷತ್ ಸದಸ್ಯ ಪಿ. ಎಚ್. ಪೂಜಾರ, ಡಾ. ಶೇಖರ ಮಾನೆ ಮತ್ತಿತರರು ಸ್ವಾಗತಿಸಿದರು. ಪಂಡಿತ ರಘೋತ್ತಮಾಚಾರ್ಯ ನಾಗಸಂಪಗಿ, ಪಂಡಿತ ಭೀಮಸೇನಾಚಾರ್ಯ ಪಾಂಡುರಂಗಿ, ಪಂಡಿತ ಬಿಂದುಮಾಧವಾಚಾರ್ಯ ನಾಗಸಂಪಗಿ, ಪಂಡಿತ ನವೀನಾಚಾರ್ಯ ಜೋಶಿ, ಪಂಡಿತ ಪ್ರಮೋದಾಚಾರ್ಯ ಆಲೂರ, ಪಂಡಿತ ವಿಜಯೇಂದ್ರಾಚಾರ್ಯ ಯತ್ನಟ್ಟಿ, ಪಂಡಿತ ಆದಿಶೇಷಾಚಾರ್ಯ ಯಲಗೂರ, ಮದ್ವೇಶಾಚಾರ್ಯ ಹಿಪ್ಪರಗಿ, ರಾಮಾಚಾರ್ ದೇಸಾಯಿ, ಸ್ವಾಗತ ಸಮಿತಿ ಗೌರವಾಧ್ಯಕ್ಷ ಎಸ್. ಬಿ. ಸತ್ಯನಾರಾಯಣ, ಅಧ್ಯಕ್ಷ ರಾಘವೇಂದ್ರರಾವ್,

ಅಖಿಲ ಭಾರತ ಬ್ರಾಹ್ಮಣ ಮಹಾಸಭಾ ಜಿಲ್ಲಾ ಪ್ರತಿನಿಧಿ ಗುರುರಾಜ ಗೊಂಬಿ, ನರಸಿಂಹ ಆಲೂರ, ನಾರಾಯಣ ದೇಸಾಯಿ, ಪವನ ಸೀಮಿಕೇರಿ, ಸಂತೋಷ ಗದ್ದನಕೇರಿ, ನಾರಾಯಣ ತಾಸಗಾಂವ, ಕಿರಣ ಕುಲಕರ್ಣಿ, ಪ್ರದೀಪ ಪರ್ವತಿಕರ, ಮುಕುಂದ ಕುಲಕರ್ಣಿ, ಶ್ರೀಹರಿ ಪಾಟೀಲ, ಡಿ. ಬಿ. ಕುಲಕರ್ಣಿ, ಶಶಿ ದೇಶಪಾಂಡೆ, ಎಸ್. ಕೆ. ಕುಲಕರ್ಣಿ, ವೆಂಕಟೇಶ ದೇಶಪಾಂಡೆ, ಭಾಸ್ಕರ ಮನಗೂಳಿ, ಸಂಜೀವ ಗುಡಿ, ಗಿರೀಶ ಆಶ್ರಿತ, ಡಾ. ಪವನ ಕುಲಕರ್ಣಿ, ಅನಂತ ಮಳಗಿ, ವಿನಾಯಕ ದೇಸಾಯಿ, ಪಾಂಡುರಂಗ ಹೊಸೂರ, ಪವನ ಮಂಕಣಿ, ಕೇಶವ ಕುಲಕರ್ಣಿ ಮತ್ತಿತರರು ನೇತೃತ್ವ ವಹಿಸಿದ್ದರು.

# ಈಗ ಕತ್ತೆಗೂಂದು ಕಾಲ: ರಾಮಪುರದಲ್ಲಿ ಡಾಂಕಿ ರೇಸ್ ಕುದುರೆಯಂತೆ ಓಡುವ ಕತ್ತೆ: ಕುದುರೆಗೂ ಬಂತು ಹಾರ್ಸ ಪವರ್

**–ಕಿರಣ ಶ್ರೀಶೈಲ ಆಳಗಿ**

**ರಬಕವಿ–ಬನಹಟ್ಟಿ :** ಕತ್ತೆ ಎಂದಾಕ್ಷಣ ಪ್ರತಿಯೊಬ್ಬರಿಗೂ ನೆನಪಾಗೋದು ಅದರ ಮೂರ್ಖತನ, ಧಡ್ಡತನ ಹಾಗೂ ಶ್ರಮಜೀವಿತನ. ಸಮಾಜದಲ್ಲಿ ಕತ್ತೆಯನ್ನು ಹೀಯಾಳಿಸುವ ಹಾಗೂ ಕೀಳುಭಾವನೆಯಿಂದ ನೋಡುವ ಜನರೆ ಹೆಚ್ಚಾಗಿದ್ದು, ಕತ್ತೆ ತಾನು ಎಷ್ಟೇ ಪ್ರಾಮಾಣಿಕವಾಗಿ ತನ್ನ ಯಜಮಾನನ ಸೇವೆ ಮಾಡಿದರೂ ಅವನಿಂದ ಅದಕ್ಕೆ ಬೈಗುಳ ಹಾಗೂ ಹೊಡೆತಗಳು ತಪ್ಪಿದ್ದಲ್ಲ. ಅಂತಹ ಕತ್ತೆಯನ್ನು ಕುದುರೆಯಂತೆ ಪಳಗಿಸಿ ರೇಸ್ ನಡೆಸುವುದನ್ನು ತಾವೆಲ್ಲಾದರೂ ಕೇಳಿದ್ದೀರಾ! ಹೌದು, ಇದು ನಡೆಯುವುದು ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ತಾಲೂಕಿನ ರಬಕವಿ–ಬನಹಟ್ಟಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ರಾಮಪುರದಲ್ಲಿ. ರಾಮಪುರದ ಶ್ರೀ ಲಕ್ಕವ್ವದೇವಿ ಉಡಿ ತುಂಬುವ ಕಾರ್ಯಕ್ರಮ ಹಾಗೂ ಶ್ರೀ ಹನುಮಾನ ದೇವರ ಓಕಳಿ ನಿಮಿತ್ಯ ಈ ಕಾರ್ಯಕ್ರಮ ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು.

"ಕತ್ತೆಗೇನು ಗೊತ್ತು ಕಸ್ತೂರಿ ವಾಸನೆ" ಒಟ್ಟಿನಲ್ಲಿ ಕತ್ತೆಯನ್ನು ಹೀಯಾಳಿಸುವ ಕಾಲದಲ್ಲಿ ಕತ್ತೆಯನ್ನು ಪಳಗಿಸಿ ರೇಸ್ಗಾಗಿ ಸಿದ್ಧಮಾಡಿ



ಅದರಲ್ಲಿ ಭಾಗವಹಿಸಿ ಬಹುಮಾನ ಗೆಲ್ಲುವ ಖುಷಿ ಮಾತ್ರ ಅಪಾರ. ಅಂತಹ ಅಪರೂಪದ ಸ್ಪರ್ಧೆ ಇಲ್ಲಿಯ ಜನರಿಗೆ ಸಾಕಷ್ಟು ಮನರಂಜನೆ ನೀಡುತ್ತಿರುವುದಂತೂ ಸತ್ಯ.

ಈ ಕತ್ತೆಗಳು ಅಗಸನ ಕತ್ತೆಗಳಲ್ಲ. ಇಲ್ಲಿ ವಾಸಿಸುವ ಭಜಂತ್ರಿ ಜನಾಂಗಕ್ಕೆ ಸೇರಿದವುಗಳು. ಗ್ರಾಮದಲ್ಲಿ ಸುಮಾರು 50 ರಿಂದ 60 ಮನೆತನಗಳನ್ನು ಹೊಂದಿರುವ ಭಜಂತ್ರಿ ಕುಟುಂಬದ ಮೂಲ ಕಸುಬು ಕೂಲಿ ಮಾಡುವುದು. ಅದಿಲ್ಲದೇ ಜೀವನವೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಇವರು ಹಲವಾರು ವರ್ಷಗಳಿಂದ ಇವರ ಜನಾಂಗದ ಬೇರೆ ಬೇರೆ ತಂಡಗಳಾಗಿ ಮಾಂಜರಿಗೆ ಇಟ್ಟಂಗಿ ಭಟ್ಟಿಗಳ ಕಡೆಗೆ, ಕತ್ತೆಗಳ ಸಮೇತ 5–6 ತಿಂಗಳು ದುಡಿಯಲು ಹೋಗಿರುತ್ತಾರೆ. ಮಳೆಗಾಲ ಪ್ರಾರಂಭವಾದ ತಕ್ಷಣ ಕತ್ತೆಗಳ ಸಹಿತ ತಮ್ಮ ಸ್ವಂತ ಗ್ರಾಮಕ್ಕೆ ಮರಳುತ್ತಾರೆ. ಅದೇ ಸಮಯಕ್ಕೆ ಈ ಜಾತ್ರೆ ಪ್ರಾರಂಭವಾಗುವುದರಿಂದ ಸುಮಾರು ಹದಿನೇಳು ವರ್ಷದ ಹಿಂದೆ ಜಾತ್ರಾ ಕಮಿಟಿಯ ಪ್ರಮುಖರಾದ ಸುರೇಶ ಗೊಲಬಾಂವಿ,

ಈರಪ್ಪ ಮೂಡಲಗಿ, ಮಹಾದೇವ ತಳವಾರ ಯಲ್ಲಪ್ಪ ತಳವಾರ, ಪ್ರಕಾಶ ಸಿಂಘನ, ನೀಲಕಂಠ ಎನ್. ಖವಟಗಿ, ಎಂ. ಎಂ. ಹೊಸಮನಿ ಸೇರಿದಂತೆ ಗ್ರಾಮದ ಸಮಸ್ತ ಹಿರಿಯರು ಕೂಡಿ ಕತ್ತೆಗಳನ್ನು ಇಷ್ಟೊಂದು ದುಡಿಸಿಕೊಳ್ಳುತ್ತಿದ್ದಾರೆ,

ಬರಗಾಲ ಬಂದಾಗ ಮದುವೆ, ಮೆರವಣಿಗೆ ಮಾಡುತ್ತಾರೆ. ನಾವು ಕತ್ತೆಗಳ ರೇಸ ಏಕೆ ಇಡಬಾರದು ಅಂತಾ ಯೋಚಿಸಿ ಸ್ಪರ್ಧೆಯನ್ನು ಇಟ್ಟೆ ಬಿಟ್ಟೆವು ಎನ್ನುತ್ತಾರೆ ಗ್ರಾಮದ ಹಿರಿಯರು. ಮೊದ ಮೊದಲು ಆರು ಕತ್ತೆಗಳು ಹಾಗೂ ಸವಾರರು ಭಾಗವಹಿಸಿ ಬಹುಮಾನ ಪಡೆದರು. ವರ್ಷದಿಂದ ವರ್ಷಕ್ಕೆ ಇದರ ಜನಪ್ರಿಯತೆ ಹೆಚ್ಚುತ್ತಾ ನಡೆದಿದ್ದು, ಈ ಸಲ ಐದು ಕತ್ತೆಗಳು ಭಾಗವಹಿಸಿದ್ದವು. ಪ್ರವೇಶ ಫೀ ರೂ. ಐವತ್ತು ಇಡಲಾಗಿತ್ತು.

ಸ್ಪರ್ಧೆಯ ಬಗ್ಗೆ ಮೊದಲೇ ತಿಳಿದುಕೊಳ್ಳುವ ಈ ಜನಾಂಗದವರು ಆ ವೇಳೆಗೆ ಇಲ್ಲಿಗೆ ಆಗಮಿಸಿ ಹದಿನೈದು ದಿನದ ಮುಂಚೆ ಪ್ರತಿ ರಾತ್ರಿ ಹತ್ತರ ನಂತರ ಭಾಗವಹಿಸುವ ಕತ್ತೆಗಳು ಮಾರ್ಗ ತಪ್ಪದಿರಲೆಂದು ಕತ್ತೆ ಹಾಗೂ ಸವಾರರು ತರಬೇತಿ ನಡೆಸುತ್ತಾರೆ. ಮರುದಿನ ನಡೆಯುವ ಸ್ಪರ್ಧೆಯಲ್ಲಿ ತಮ್ಮ ಕತ್ತೆಯೊಂದಿಗೆ ಆಗಮಿಸುವ ಯುವಕರು ತುಂಬಾ ಉತ್ಸಾಹದಿಂದಲೇ ಇದರಲ್ಲಿ ಬಾಗವಹಿಸಿ ರಾಮಪುರದ ರಾಮ ಮಂದಿರದಿಂದ ಆನಂದ ಚಿತ್ರಮಂದಿರದವರೆಗೆ ಸಾಗಿ ಪುನಃ ಪ್ರಾರಂಭದ ಸ್ಥಳಕ್ಕೆ ಬರುವಂತಹ ಪ್ರದರ್ಶನ ನಡೆಯುತ್ತವೆ. ವಿಜೇತರಿಗೆ ಬಹುಮಾನ ಹಾಗೂ ಕಮಿಟಿ ವತಿಯಿಂದ ಫಾಲ್ ಕೂಡಾ ಕೊಡಲಾಗುತ್ತದೆ.

ಒಟ್ಟಿನಲ್ಲಿ ಹೊತ್ತು ಬಂದಾಗ ಕತ್ತೆಯ ಕಾಲು ಹಿಡಿಯಬೇಕು ಎನ್ನುವಂತೆ ಕತ್ತೆಯನ್ನು ಕುದುರೆಯಂತೆ ಓಡಿಸಲು ಸಜ್ಜು ಮಾಡುವ ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ಯುವಕರ ಉತ್ಸಾಹ ಮಾತ್ರ ಬಹಳಷ್ಟಿತ್ತು. ಜೊತೆಗೆ ಸ್ಪರ್ಧೆಯಲ್ಲಿ ವಿಜೇತರಾಗುತ್ತಿದ್ದಂತೆ ಗುಲಾಲು, ಪಟಾಕಿ ಹಾರಿಸಿ ಸಂಭ್ರಮ ಪಡುವುದರ ಜೊತೆಗೆ ಗೆದ್ದಂತಹ ಕತ್ತೆಯ ಜೊತೆ ಸೆಲ್ಫಿ ತೆಗೆದುಕೊಳ್ಳತ್ತಿರುವುದು ಕಂಡು ಬಂತು.

## ದಾನಿಗೊಂಡ ಕಾಲೇಜಿನಲ್ಲಿ ಕಾನೂನು ಅರಿವು ಕಾರ್ಯಕ್ರಮ. ವಿದ್ಯಾರ್ಥಿ ಘಟ್ಟದಲ್ಲಿಯೇ ಕನಿಷ್ಠ ಕಾನೂನು ಅರಿತುಕೊಳ್ಳಿ.

**ತೇರದಾಳ :** ದೇಶದ ಸಂವಿಧಾನ, ಕಾನೂನು ಬಹಳಷ್ಟು ಶ್ರೇಷ್ಠವಾಗಿವೆ. ಆದ್ದರಿಂದ ವಿದ್ಯಾರ್ಥಿ ಘಟ್ಟದಲ್ಲಿಯೇ ವಿದ್ಯಾರ್ಥಿಗಳು ಕನಿಷ್ಠ ಕಾನೂನಿನ ಬಗ್ಗೆ ಅರಿತು ಕೊಳ್ಳುವುದು ಮುಖ್ಯವಾಗಿದೆ ಎಂದು ಇಲ್ಲಿನ ದಾನಿಗೊಂಡ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಪಿ. ಬಿ. ಅಪರಾಜ ಹೇಳಿದರು.

ದಾನಿಗೊಂಡ ವಾಣಿಜ್ಯ ಹಾಗೂ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆಯ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಾನೂನು ತಿಳಿದುಕೊಳ್ಳುವುದರ ಜತೆಗೆ ಪಾಲಿಸುವುದು, ಗೌರವಿಸುವುದನ್ನು ಕೂಡ ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು. ಕಾನೂನಿಗೆ ವಿರುದ್ಧವಾದ ಕೆಲಸಗಳಲ್ಲಿ ಪಾಲ್ಗೊಳ್ಳುವುದು ಅಪರಾಧ ಎಂದು ಹೇಳಿದರು. ನ್ಯಾಯವಾದಿ ವಿನೋದ ಪತ್ತಾರ ವ್ಯಸನ ಮುಕ್ತ ಸಮಾಜ,

ಕಾನೂನಿನ ಸುರಕ್ಷತಾ ಕ್ರಮಗಳು ಸೇರಿದಂತೆ ಹಲವು ವಿಚಾರಗಳನ್ನು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು. ಪ್ರಾಚಾರ್ಯ ಪ್ರಕಾಶ ಮಾಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿ. ಎಸ್. ನೇಗಿನಾಳ, ಭರತೇಶ ಘಟನಟ್ಟಿ ಉಪಸ್ಥಿತರಿದ್ದರು.

## ಟ್ರೆನಿ ಟೇಸ ಸಂಗೀತ ಕಲಾ ಟ್ರಸ್ಟ್ ನ ವಾರ್ಷಿಕೋತ್ಸವ



**ಬೆಂಗಳೂರು :** ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಮಹಿಳಾ ವಿಶ್ರಾಂತಿ ಕೊಠಡಿಯ ಸಭಾಂಗಣದಲ್ಲಿ ಟ್ರಿನಿಟೀಸ್ ಸಂಗೀತ ಕಲಾ ಟ್ರಸ್ಟಿನ ವತಿಯಿಂದ ಸಂಗೀತ ಸಂಭ್ರಮ ಸಾಂಸ್ಕೃತಿಕ ಕಲರವ ಮತ್ತು ವಾರ್ಷಿಕೋತ್ಸವ ಸಮಾರಂಭವನ್ನು ಅಯೋಜಿಸಲಾಗಿತ್ತು.ಈ ಸಮಾರಂಭಕ್ಕೆ ಪಿ.ಇ.ಎಸ್.ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ.ನಂದಾ.ಎಂಎಲ್.ಹಿರಿಯ ಗಾಯಕರಾದ ಶ್ರೀ ಅಚ್ಯುತ ಸಂಕೇತಿ.ನಾಡಿನ ಪ್ರಸಿದ್ಧ ದ್ವಿಕಂಠ ಗಾಯಕರಾದ ಸಿಂಗರ್ ಶ್ರೀನಿವಾಸ್.ವಿಶ್ವಮಾನವ ಸಾಂಸ್ಕೃತಿಕ ಪ್ರತಿಷ್ಠಾನದ ಉಪಾಧ್ಯಕ್ಷೆ ಶ್ರೀಮತಿ ಮಧುಮಾಲತಿ. ಮುಖ್ಯ ಅತಿಥಿಯಾಗಿ ಸಮಾರಂಭಲ್ಲಿ ಭಾಗವಹಿಸಿದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿನ ಸಾಧನೆಯ ಸಾಧಕರಿಗೆ ಟ್ರಿನಿಟೀಸ್ ಕಲಾಶ್ರೀ. ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈಪ್ರಶಸ್ತಿಗೆಪುರಸ್ಕೃತರಾದಕೃಷಿಕಶ್ರೀಟಿ.ಸಿ.ರಾಮಕೃಷ್ಣ. ಗಾಯಕರಾದ ಶ್ರೀಮತಿ ತಿಲಕ.ಶಿಕ್ಷಕರಾದ ಕುಮಾರಿ ರೇಖಾ.ಎನ್.ಸಮಾಜ ಸೇವಕರಾದ ಶ್ರೀಮತಿ ಎಂ.ಯಶೋದ ಪೈ.ಬೋಗಳ ಶಾಸ್ತ್ರ ಉಪನ್ಯಾಸರಾದ ಶ್ರೀ ಪೂರ್ಣಚಂದ್ರ ಎಂ.ಎ. ಇವರಿಗೆ ಟ್ರಸ್ಟಿನ ಗೌರವಾಧ್ಯಕ್ಷ ಎಂ.ಪುಟ್ಟರಾಜು. ರವರು ಪ್ರಶಸ್ತಿ ನೀಡಿ ಗೌರವಿಸಿದರು.

## ಮೀನುಗಾರರಿಂದ ಅರ್ಜಿ ಆಹ್ವಾನ

**ಬಾಗಲಕೋಟ :** 2025–26ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಜಿಲ್ಲಾ ವಲಯ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಮೀನುಗಾರರಿಗೆ ಉಚಿತವಾಗಿ ಮೀನುಗಾರಿಕಾ ಸಲಕರಣೆ ಕಿಟ್ಟುಗಳನ್ನು ವಿತರಿಸಲಾಗುವುದು. ಮೀನುಗಾರಿಕೆಯಲ್ಲಿ ಅನುಭವ ಹೊಂದಿರುವ ಅರ್ಹ ಸಾಮಾನ್ಯ ವರ್ಗ, ಮಹಿಳೆಯರಿಗೆ, ಅಲ್ಪಸಂಖ್ಯಾತರಿಗೆ ಮತ್ತು ಅಂಗವಿಕಲರಿಗೆ ಮೀನುಮಾರಾಟಕ್ಕೆ ದ್ವಿಚಕ್ರವಾಹನ ಖರೀದಿಗೆ ಸಹಾಯ, ರಾಜ್ಯ ವಲಯ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಮೀನುಗಾರಿಕೆ ಸಲಕರಣೆ ಕಿಟ್ (ಹರಿಗೋಲು, ಹುಟ್ಟು, ಬಲೆ ಜೀವರಕ್ಷಕ ಸಾಧನಗಳನ್ನು) ಉಚಿತವಾಗಿ ವಿತರಿಸುವುದು, ಕೆರೆ ಅಂಚಿನಲ್ಲಿ ಮೀನುಮರಿ ಪಾಲನೆಗೆ ಸಹಾಯ, ಮೀನುಮರಿ ಖರೀದಿಗೆ ಸಹಾಯಧನ ಯೋಜನೆಗಳನ್ನು ಪಾರದರ್ಶಕವಾಗಿ ಹಾಗೂ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಬಾಗಲಕೋಟೆ ಜಿಲ್ಲೆಯ ಅರ್ಹ ಮೀನುಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಯೋಜನೆಗಳ ಸೌಲಭ್ಯ ಪಡೆಯಲು ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬಾದಾಮಿ, ಜಮಖಂಡಿ ಕಛೇರಿಗಳಿಂದ ಮಾಹಿತಿ/ಅರ್ಜಿಗಳನ್ನು ಪಡೆದು, ನಿಯಮಾನುಸಾರ ಅವಶ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ಜುಲೈ.18 ರೊಳಗೆ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬಾದಾಮಿ, ಜಮಖಂಡಿ ಕಛೇರಿಗಳಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬಾದಾಮಿ, ಜಮಖಂಡಿ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕೆಂದು ಮೀನುಗಾರಿಕೆ ಉಪನಿರ್ದೇಶಕರಾದ ಅಂಜನಾದೇವಿ. ಟಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ವಿದ್ಯುತ್ ತಗಲಿ ಮಹಿಳೆ ಸಾವು

**ಹೊಸಪೇಟೆ :** ವಾಷಿಂಗ್ ಮಿಷನ್ ಸ್ವಿಚ್ ತೆಗೆಯಲು ಹೋದ ಸಮಯದಲ್ಲಿ ವಿದ್ಯುತ್ ಶಾಕ್ ತಗುಲಿ ಮಹಿಳೆ ಸಾವನ್ನಪ್ಪಿರುವ ಘಟನೆ ಚಿತ್ತವಾಡಗಿಯಲ್ಲಿ ಜೂನ್ 24ರ ಬೆಳಗ್ಗೆ 10.30 ನಡೆದಿದೆ 12 ವಾರ್ಡ್ ಬಣಗಾರ ಓಣಿ ಕೆ. ಉಸ್ಮಾನ್ ಎಂಬವರ ಪತ್ನಿ ಮಹಜಬೀನ್ (34) ಮೃತಪಟ್ಟವರು .ಮಹಜಬೀನ್ ತಮ್ಮ ಮನೆಯಲ್ಲಿ ಪಾತ್ರೆಗಳನ್ನು ತೊಳೆದು ಹಸಿ ಕೈಯಲ್ಲಿ ವಾಷಿಂಗ್ ಮಿಷನ್ ಸ್ವಿಚ್ ತೆಗೆಯಲು ಹೋದ ಸಮಯದಲ್ಲಿ ಆಕಸ್ಮಿಕವಾಗಿ ಕರೆಂಟ್ ಶಾಕ್ ಹೊಡೆದು ಕೆಳಗೆ ಬಿದ್ದಿರುತ್ತಾರೆ



ತಕ್ಷಣ ಅವರನ್ನು ಹೊಸಪೇಟೆ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾದರೂ, ಆಸ್ಪತ್ರೆಗೆ ತಲುಪುವಷ್ಟರಲ್ಲೇ ಅವರು ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ. ಈ ಸಂಬಂಧ ಚಿತ್ತವಾಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಪಟ್ಟಣದ ರಾಜವಾಡೆ ಆವರಣದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮನ ಮೂರ್ತಿ ಸ್ಥಾಪನೆಯ ದ್ವಿತೀಯ ವಾರ್ಷಿಕೋತ್ಸವ




**ತಾಳಿಕೋಟಿ :** ಪಟ್ಟಣದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮನ ಮೂರ್ತಿ ಪ್ರತಿಷ್ಠಾಪನೆಯ ಎರಡನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡ ಧರ್ಮಸಭೆಯ ಕಾರ್ಯಕ್ರಮದಲ್ಲಿ ಶಾಸಕ ಅಪ್ಪಾಜಿ ನಾಡಗೌಡರ ಪುತ್ರಿ, ರಾಜ್ಯ ಕಾಂಗ್ರೆಸ್ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಪಲ್ಲವಿ ನಾಡಗೌಡ ಇವರನ್ನು ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕೂಡಲಸಂಗಮ ಪಂಚಮಸಾಲಿ ಲಿಂಗಾಯತ ಪೀಠದ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಮಹಾಸ್ವಾಮಿಗಳು,ನಾವದಗಿ ಬ್ರಹನ್ಮಠದ ಷ.ಬ್ರ.ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರು, ಜ್ಯೋತಿಷ್ಯ ರತ್ನ ರಾಮಲಿಂಗಯ್ಯ ಶ್ರೀಗಳು, ಮೆಹಬೂಬ ಮುತ್ಯಾ ಕೋರವಾರ, ಪ್ರವಚನಕಾರ ಪ್ರಭುಲಿಂಗ ಶರಣರು, ಸಮಿತಿಯ ಅಧ್ಯಕ್ಷೆ ನೀಲಮ್ಮ ಪಾಟೀಲ ಹಾಗೂ ಹಲವಾರು ಗಣ್ಯರು ಇದ್ದರು.

# ಕಾನೂನನ್ನು ಪಾಲಿಸುವ ಭರದಲ್ಲಿ ಮಾನವತೆ ಸೋಲದಿರಲಿ !

ಊರಿಗೆ ಹೊರಟ ಅಮ್ಮನನ್ನು ಬಸ್ ಹತ್ತಿಸಲು ಮೆಜೆಸ್ಟಿಕ್ಕಿಗೆ ಮೆಟ್ರೋದಲ್ಲಿ, ನಾನು ಅಮ್ಮ ಹೊರಟ್ವಿ.... ಬನಶಂಕರಿಯಲ್ಲಿ ಮೆಟ್ರೋ ರೈಲ್ ನಿಲ್ತು. ರೈಲು ನಿಂತಕೂಡಲೇ ಚಕಚಕ ಅಂತ ಪ್ರಯಾಣಿಕರು ಹತ್ತಿದ್ರು.

ಅದರಲ್ಲಿ 70–75 ವಯಸ್ಸಿನ ವಯೋವೃದ್ಧರೊಬ್ಬರು ಅವರ ಪತ್ನಿ ಹಾಗೂ 8–9 ವರ್ಷ ವಯಸ್ಸಿನ ಮೊಮ್ಮಗುವಿನ ಜೊತೆ ಬೋಗಿಯೊಳಗೆ ಬಂದ್ರು. ನಾನು ಮಹಿಳೆಯರಿಗೆ ಮೀಸಲಾದ ಬೋಗಿಯಲ್ಲಿ ಕೂತಿದ್ದೆ. ಹಿರಿಯರನ್ನು ಕಂಡ ಕೂಡಲೇ ಅವರಿಗೆ ಕುಳಿತುಕೊಳ್ಳಲು ಸೀಟ್ ಬಿಡೋಣ ಅಂತ ಎದ್ದು ನಿಂತೆ. ಅಷ್ಟೊತ್ತಿಗೆ ಸರಿಯಾಗಿ, ನನ್ನ ಎದುರಿಗೆ ಕುಂತ ನೋಡಲು ನಾಗರಿಕರ ಹಾಗೆ ಕಂಡ ಮಹಿಳೆಯೊಬ್ಬರು, "ಹಲೋ ನೀವ್ಯಾಕೆ ಏಳ್ತೀದಿರ ??ಇದು ಮಹಿಳಾ ಬೋಗಿ, ಇಲ್ಲಿ ಮಹಿಳೆಯರಿಗೆ ಮಾತ್ರ ಪ್ರವೇಶ. ಇಲ್ಲಿ ಗಂಡಸರಿಗೆ ಪ್ರವೇಶವಿಲ್ಲ " ಅಂತ ಹೇಳಿದ್ದಲ್ಲದೇ ಬಹಳ ಒರಟಾಗಿ, ಹಿರಿಯರನ್ನು ಕುರಿತು, "ನೀವು ಮುಂದಿನ ಬೋಗಿಗೆ ಹೋಗಿ, ಇಲ್ಲಾಂದ್ರೆ ಪೋಲೀಸ್ ಗೆ ಹೇಳ್ಬೇಕಾಗುತ್ತೆ" ಅಂತ ಏರುಧ್ವನಿಯಲ್ಲಿ ಬೈಯ್ಯೋ ಹಾಗೆ ಮಾತಾಡಿದ್ರು...ಅರೆ !! ಬಿಡಿ ಮೇಡಮ್ ಪಾಪ ಅವರಿಗೆ ತೀರಾ ವಯಸ್ಸಾಗಿದೆ ಅಂತ ಆಕೆಗೆ ಸಮಾಧಾನ ಮಾಡೋಷ್ಟರೊಳಗೆ.... "ಅದ್ಹೇಗಾಗತ್ತೆರೀ ಗಂಡಸರ್ಯಾಕೆ ಮಹಿಳಾ ಬೋಗಿಗೆ ಬರ್ಬೇಕು ಅದು ತಪ್ಪು" ಅಂತ ಆಕೆಯೂ ಸೇರಿ ಮೂನಾ9ಲ್ಕು ಮಹಿಳೆಯರು ಬಡಬಡಾಯ್ಸೋಕೆ ಶುರು ಮಾಡಿದ್ರು...



ತೀವ್ರವಾಗಿ ಅವಮಾನ ಹಾಗೂ ಗೊಂದಲದಲ್ಲಿದ್ದ ವಯೋವೃದ್ಧರನ್ನು ನಾನೇ ಮಾತನಾಡಿಸಿ, ಜನರಲ್ ಬೋಗಿಗೆ ಹೋಗುವಂತೆ ಹೇಳಿ, ಕುಳಿತುಕೊಳ್ಳಲು ವ್ಯವಸ್ಥೆ ಮಾಡಿ ಬಿಟ್ಟು ಬಂದೆ....ಪಾಪ ಅವರಿಗೆ ತನ್ನ ವಯಸ್ಸಾದ ಪತ್ನಿ, ಮೊಮ್ಮಗು ಇಳಿಯುವ ಸ್ಟಾಪ್ ಗಳನ್ನು ಎಲ್ಲಿ ವ್ಯತ್ಯಾಸ ಮಾಡ್ಕೊಂತಾರೆನೋ ಅನ್ನೋ ತಳಮಳ, ಭಯ, ಆತಂಕ ಇತ್ತು ಅನ್ಸತ್ತೆ. ಆಗಾಗ ಮಹಿಳಾ ಬೋಗಿ ಕಡೆ ನೋಡ್ತಾನೇ ಇದ್ರು..... ದಂಪತಿಗಳು ನನ್ನ ಕಡೆ ಧನ್ಯತಾಭಾವದಿಂದ ನೋಡುವಾಗ ಮನಸ್ಸಿಗೆ ಸಿಕ್ಕಾಪಟ್ಟೆ ನೆಮ್ಮದಿ ಖುಷಿ ಅನ್ನಿಸ್ತಿತ್ತು...ಆದರೂ ನನಗೆ ಅನಿಸಿದ್ದು ಒಂದೇ ಭಾವನೆ....ಮಾನವೀಯ ಮೌಲ್ಯಗಳು ಅರ್ಥ ಕಳ್ಕೊಂತಿವೆಯಾ ಅಂತ...

ಮಹಿಳೆಯರೆಂದರೆ ಸಹನೆ, ಕರುಣೆ, ಅಂತಃಕರಣ ತಾಳ್ಮೆ, ಸಾವಧಾನದ ಪ್ರತೀಕ ಅಂತಾರಪ್ಪ. ಆ ವಿಚಾರದಲ್ಲಿ ಪುರುಷರಿಗಿಂತ ಒಂದು ಹೆಜ್ಜೆ ಮುಂದೆನೇ ಅಂತ ಬಡಾಯಿ ಕೊಚ್ಕೊತಾರೆ. ಆದರೆ ಆ ನಿಲುವಿನಲ್ಲಿ ಎಷ್ಟರ ಮಟ್ಟಿಗೆ ಸತ್ಯವಿದೆ ? ಬರೀ ಸಮಾನತೆ ಸಮಾನತೆ ಅಂತ ಮಾತಾಡೋ ಸ್ತ್ರೀವಾದಿಗಳು ಎಷ್ಟೋ ರೂಲ್ಸನ್ನು, ಕಾನೂನನ್ನು ಧಿ:ಕ್ಕರಿಸಿದ್ದರೂ, ಅವರ ತಪ್ಪು ಅವರಿಗೆ ಗೊತ್ತಿದ್ದರೂ ಗೊತ್ತಿಲ್ಲದವರಂತೆ ಮರೆಮಾಚಿ ಮನುಷ್ಯತ್ವದ ಅಪರಾವತಾರ ಅಂತ ಕಿರುಚಿ ಎಲ್ಲ ತಪ್ಪಿಗೂ ಪುರುಷರನ್ನೇ ಹೊಣೆ ಮಾಡೋ ಇಂಥಾ ಮಹಿಳಾಮಣಿಗಳಿಗೆ ಪ್ರಬುದ್ಧತೆಯ ಕೊರತೆ ಅನ್ನೋದೋ ?? ಉದ್ಧಟತನ ಅನ್ನೋದೋ ??ಸ್ವಯಂಘೋಷಿತ ನಿರಪರಾಧಿ ಗಳೆನ್ನುವುದೋ ?? ತಾವೇ ತಮನೆಮುಗ್ಧರು ಅಂತ ಪರದೆ ಹಾಕಿಕೊಂಡು ಇಂಥ ಸಣ್ಣ ಬುದ್ಧಿಗೆ ನೀರೆರಿತಿದ್ದಾರೋ!! ?? ಗೊತ್ತಿಲ್ಲ....

ಮೆಟ್ರೋ ರೈಲಿನ ಈ ಘಟನೆಯಿಂದ ಇಂಥಾ ಆಲೋಚನೆ ಹಾಗೆಯೇ ರೈಲಿನಷ್ಟೇ ವೇಗವಾಗಿ ನನ್ನ ತಲೆಯಲ್ಲಿ ಓಡೋಕೆ ಶುರುವಾಯ್ತು. ಪಾಪ ಗೊತ್ತಿಲ್ಲದೇ ಮಹಿಳಾ ಬೋಗಿ ಹತ್ತಿದ್ದ ಆ ಹಿರಿಯರನ್ನು ಅವಮಾನಿಸುವ ಪ್ರಮೇಯವೇನಿತ್ತು ?ನಿಧಾನವಾಗಿ ಹೇಳಬಹುದಿತ್ತಲ್ವಾ ?ಮನುಷ್ಯತ್ವದ ಬಗ್ಗೆ ಉದ್ದುದ್ದ ಗೀಚೋ ಮಹಿಳಾ ಮಣಿಗಳಿಗೆ, ವಯೋವೃದ್ಧರನ್ನು ಗದರಿಸಿ ಅವಮಾನಿಸುವಾಗ ಅವರ ಮಾನವೀಯತೆಯ ಮಾತುಗಳು ಅರ್ಥಹೀನವಾಯ್ತಾ ? ?ಕಾನೂನು ಕಟ್ಟಳೆ ಎಲ್ಲವನ್ನೂ ನಾಗರಿಕ ಪ್ರಜೆಗಳು ಪಾಲಿಸಬೇಕು ನಿಜ. ಅದು ರೈಲಾಗಲೀ, ಬಸ್ಸಾಗಲೀ, ಬದುಕಾಗಲೀ, ಆದರೆ ಮನುಷ್ಯತ್ವಕ್ಕೆ ಕಾನೂನಿನಲ್ಲೂ ಕನಿಕರವಿದೆ ಅಂತಾದ್ಮೇಲೆ ಮಹಿಳೆಯರಲ್ಲಿ ಯಾಕೆ ಹೀಗೆ ಸಾತ್ವಿಕತೆ ಇಳಿಮುಖವಾಗುತ್ತಿದೆ ? ಅವರ ಇಂಥ ಎಳಸು ನಡವಳಿಕೆ ಬಲಿಯೋದು ಯಾವಾಗ ? ಕಾಲವೇ ಉತ್ತರಿಸಬೇಕಿದೆ.

ಕಾನೂನನ್ನು ಪಾಲಿಸೋ ಭರದಲ್ಲಿ ಮಾನವತೆ ಸೋಲದಿರಲಿ....

ನನ್ನ ಸ್ಟಾಪ್ ಬಂತು, ಅಮ್ಮನನ್ನು ಕರೆದುಕೊಂಡು,ಊರಿನ ಬಸ್ ಹತ್ತಿಸಲು ನಡೆದೆ. (ಬಸ್ಸಲ್ಲಿ ತೆಗೆದ ಫೋಟೋ ಇದು)

* * *

**ಶೀಲಾ ಟಿ. ಕೆ.**
**ಬೆಂಗಳೂರು.**

# ಸೊಗಡು ತಿಳಿಸಲು ಪೌರತ್ವ ತರಬೇತಿ ಶಿಬಿರ ತುಂಬಾ ಉಪಯುಕ್ತವಾಗಿದೆ



**ವಿಜಯಪುರ :** ಜೀವನವನ್ನು ಪರಿಪೂರ್ಣಗೊಳಿಸಲು ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಗ್ರಾಮೀಣ ಭಾಗದ ಸೊಗಡು ತಿಳಿಸಲು ಪೌರತ್ವ ತರಬೇತಿ ಶಿಬಿರ ತುಂಬಾ ಉಪಯುಕ್ತವಾಗಿದೆ ಎಂದು ಡಯಟ್ ಪ್ರಾಚಾರ್ಯೆ ಉಮಾದೇವಿ ಸೊನ್ನದ ಹೇಳಿದ್ದಾರೆ.

ಗುರುವಾರ ತಿಕೋಟಾ ತಾಲೂಕಿನ ಇಟ್ಟಂಗಿಹಾಳ ಬಳಿ ಇರುವ ಸದ್ಗುರು ಸಚ್ಚಿದಾನಂದ ಮಹಾರಾಜಯರ ಆಶ್ರಮದಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯ ಜ್ಞಾನಯೋಗಿ ಸಿದ್ಧೇಶ್ವರ ಸ್ವಾಮಜಿ ಶಿಕ್ಷಣ ಮಹಾವಿದ್ಯಾಲಯ ಮತ್ತು ಎನ್.ಎಸ್.ಎಸ್ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕವಿಶೇಷಶಿಬಿರಉದ್ಘಾಟಿಸಿ ಅವರ ಮಾತನಾಡಿದರು. ಗ್ರಾಮೀಣ ಭಾಗದ ಸಂಸ್ಕೃತಿಯ ಬಗ್ಗೆ ತಿಳಿಯಲು ಇಂಥ ಶಿಬಿರಗಳು ಅನುಕೂಲವಾಗಿವೆ. ಅಲ್ಲದೇ, ನಗರದ ಜೊತೆಗೆ ಗ್ರಾಮೀಣ ಸೊಗಡನ್ನುಅರ್ಥಮಾಡಿಕೊಂಡು ದೇಶದ ಉತ್ತಮ ನಾಗರಿಕನ್ನಾಗಿ ಮಾಡಲು ಸಹಕಾರಿಯಾಗಿವೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಇಟ್ಟಂಗಿಹಾಳ ಸಮತಾ ನಿಕೇತನ ಚಾರಿಟೇಬಲ್ ಟ್ರಸ್ಟ್‌ಸದಸ್ಯಎಂ.ಎಂ.ಬಿರಾದಾರ, ಕಾಲೇಜಿನ ಪ್ರಾಚಾರ್ಯೆ ಡಾ. ಬಿ ವೈ ಖಾಸನಿಸ, ಸಹಪ್ರಾಧ್ಯಾಪಕ ಡಾ. ಎಂ. ಬಿ. ಕೋರಿ, ಆಶ್ರಮದ ಚೇರಮನ್ ಡಾ. ಎಂ. ಎಸ್. ಹಿರೇಮಠ, ಏನ್.ಎಸ್.ಎಸ್ ಸಂಯೋಜಕ ಡಾ. ಬಿ. ಎಸ್. ಹಿರೇಮಠ ಮುಂತಾದವರು ಉಪಸ್ಥಿತರಿದ್ದರು.

# ತನ್ನ ಸಾಮರ್ಥ್ಯವನ್ನು ಅರಿತುಕೊಂಡವನು ಸಾಧಕ: ಬಸವರಾಜ ಯಲಿಗಾರ

**ವಿಜಯಪುರ :** ಈ ಜಗತ್ತಿನಲ್ಲಿ ಎಲ್ಲವನ್ನು ಸಾಧಿಸಬಲ್ಲ ಶಕ್ತಿ ಪ್ರತಿಯೊಬ್ಬರಲ್ಲಿಯೂ ಇರುತ್ತದೆ. ಆದರೆ ಯಾವ ವ್ಯಕ್ತಿಯೂ ತನ್ನ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳುತ್ತಾನೋ ಆತನು ಮಾತ್ರ ಸಾಧಕನಾಗಿ ಹೊರ ಹೊಮ್ಮುತ್ತಾನೆ. ಸಾಧನೆ ಎಂಬುದು ಸಾಧಕನ ಸ್ವತ್ತಾಗಿರುತ್ತದೆಯೇ ಹೊರತು ಯಾವತ್ತೂ ಸೋಮಾರಿಯ ಸ್ವತ್ತಾಗಿ ಇರುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಹ ತನ್ನ ಸಾಮರ್ಥ್ಯವನ್ನು ಸದ್ಬಳಕೆ ಮಾಡಿಕೊಂಡು ಯಶಸ್ಸಿನ ಹಾದಿಯಲ್ಲಿ ಮುನ್ನುಗ್ಗಬೇಕು ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಬಸವರಾಜ ಯಲಿಗಾರ ಹೇಳಿದರು.



ನಗರದ ಎಕ್ಸಲಂಟ್ ವಿಜ್ಞಾನ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ 2025 ನೇ ಸಾಲಿನ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಹಾಗೂ ಪುಸ್ತಕ ಲೋಕಾರ್ಪಣೆ ಮತ್ತು ಸಾಧಕರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ವಿದ್ಯಾರ್ಥಿಗಳು ಸಣ್ಣ ಸಣ್ಣ ಸೋಲುಗಳಿಗೆ ಕುಗ್ಗಿ ಹೋಗುತ್ತಾರೆ. ಈ ಕಾರಣದಿಂದಾಗಿ ದೊಡ್ಡಮಟ್ಟದ ಯಶಸ್ಸು ಪಡೆದುಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ. ಕಾರಣ ಇಲ್ಲಿಯ ವರೆಗೂ ನಾವು ಕೇವಲ ಶೇ.5ರಷ್ಟು ಮಾತ್ರ ನಮ್ಮನ್ನು ಅರ್ಥ ಮಾಡಿಕೊಂಡಿದ್ದೇವೆ. ಇನ್ನೂ ಶೇ.95ರಷ್ಟು ನಮಗೆ ನಾವೇ ಅರ್ಥವಾಗದೇ ಉಳಿದಿದ್ದೇವೆ. ಹೀಗಾಗಿಯೇ ನಾವುಬೇರೆಯವರನ್ನುನಂಬಿದಷ್ಟುನಮ್ಮನ್ನು ನಾವು ನಂಬುತ್ತಿಲ್ಲ. ಎಲ್ಲಿಯವರೆಗೂ ತಮ್ಮ ಸಾಮರ್ಥ್ಯವನ್ನುಅರಿತುಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಅಂದುಕೊಂಡಿದ್ದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ನಿಟ್ಟಿನಲ್ಲಿ ಸತತ ಪರಿಶ್ರಮ ಪಟ್ಟಾಗ ಮಾತ್ರ ಗೆಲುವು ದಕ್ಕುತ್ತದೆ ಎಂದರು.

ಯಶಸ್ಸು ಎಂದರೆ ಅದು ರಾತ್ರೋರಾತ್ರಿ ಜರುಗುವ ಪವಾಡವಲ್ಲ. ಎಷ್ಟೋ ವರ್ಷಗಳ ತಪ್ಪಸ್ಸಿನ ಒಟ್ಟು ಮೊತ್ತವಾಗಿರುತ್ತದೆ ಎಂದು ಹೇಳಿದ ಅವರು, ಬರೀ ಇಂಜಿನೀಯರ್, ಡಾಕ್ಟರ್ ಎನ್ನುವ ಕಡೆ ಗೋಲು ನಿಗದಿ ಪಡಿಸಿಕೊಳ್ಳದೇ ಬೇಸಿಕ್ ಸೈನ್ಸ ಕಡೆಗೂ ಗಮನ ಹರಿಸಿದಲ್ಲಿ ವಿಫುಲ ಅವಕಾಶಗಳ ಜೊತೆಗೆ ಉತ್ತಮ ಭವಿಷ್ಯ ದೊರೆಯುತ್ತದೆ ಎಂದು ಹೇಳಿದರು.

ವಿಶೇಷ ಸನ್ಮಾನ ಸ್ವೀಕರಿಸಿ ಮಾತನಾಡಿದ ಹೊಟೇಲ್ ಉದ್ಯಮಿ ಶಾಂತೇಶ ಕಳಸಗೊಂಡ, ಸ್ವಾಮಿ ವಿವೇಕಾನಂದರು ಶಕ್ತಿಯೇ ಜೀವನ ನಿಶ್ಯಕ್ತಿಯೇ ಮರಣ ಎಂದು ಹೇಳಿದ್ದಾರೆ. ಹೀಗಾಗಿ ನನ್ನಿಂದ ಆಗುವುದಿಲ್ಲ ಎಂದು ಕುಳಿತುಕೊಂಡರೆ ಯಾವುದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ವೇಳೆ ಹೋಟೆಲ್ ಕ್ಲೀನರ್ ಆಗಿ ಇಷ್ಟೇ ನನ್ನ ಜೀವನ ಎಂದುಕೊಂಡು ಕೂತಿದ್ದರೆ ಶಾಂತೇಶ ಕಳಸಗೊಂಡ ಒಬ್ಬ 22 ಹೊಟೆಲ್‌ಗಳ ಮಾಲೀಕನಾಗುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ.ಅದಕ್ಕೆಕಾರಣವಾಗಿದ್ದು ಧನಾತ್ಮಕ ವಿಚಾರಧಾರೆಗಳು. ನೀವು ಧನಾತ್ಮಕವಾಗಿ ಚಿಂತನೆ ಮಾಡಿದರೆ ಬದುಕಿನಲ್ಲಿ ಯಶಸ್ಸು ಕಾಣುತ್ತೀರಿ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೌಲಗಿ ಅವರು, ಸತ್ಯ ಶೋಧನೆಯ ದಾರಿಯಲ್ಲಿ ಹೊರಟ ಸಿದ್ಧಾರ್ಥ ನನ್ನಿಂದ ಆಗದು ಎಂದು ಮರಳಿ ಬಂದಿದ್ದರೆ ಬುದ್ಧನಾಗುತ್ತಿರಲಿಲ್ಲ. ನಾನು ಚಿಕ್ಕವನಿದ್ದೇನೆ ನನ್ನಿಂದ ಏನಾಗುತ್ತದೆ ಎಂದು ಹಿಂದೆ ಹೆಜ್ಜೆ ಇಟ್ಟಿದ್ದರೆ ವೈಭವ ಸೂರ್ಯವಂಶಿ ಎನ್ನುವ ಹದಿನಾಲ್ಕರ ಪೋರ ಐಪಿಎಲ್‌ನಲ್ಲಿ ದಾಖಲೆ ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಎಲ್ಲರೂ ಚಾಂಪಿಯನ್‌ಗಳ ಎದುರು ನಾನೇನು ಮಾಡುವದಕ್ಕೆ ಸಾಧ್ಯವಾಗುತ್ತದೆ ಎಂದು ಕೈಕಟ್ಟಿಕೂತಿದ್ದರೆ ಗುಕೇಶ್ ಚದುರಂಗದ ಚಾಂಪಿಯನ್ ಆಗಿ ಹೊರ ಹೊಮ್ಮುವುದಕ್ಕೆ ಆಗುತ್ತಿರಲಿಲ್ಲ. ಹಾಗೆಯ ಇಂದು ಆ ವಿಷಯ ಕಠಿಣವಿದೆ. ಈ ವಿಷಯ ಕಬ್ಬಿಣದ ಕಡಲೆಯಾಗಿದೆ ಎಂದುಕೊಂಡು ಕೂತರಂ ?ಕಾಲೇಜು ಶಿಕ್ಷಣ ಪೂರೈಸುವುದಕ್ಕೆ ಸಾಧ್ಯವಿಲ್ಲ. ಎಲ್ಲಿ ಕಠಿಣತೆ ಇದೆಯೋ ಅಲ್ಲಿ ಶ್ರೇಷ್ಠತೆ ಇರುತ್ತದೆ. ಕಠಿಣತೆಯನ್ನು ಬೇಧಿಸಿದಲ್ಲಿ ಶ್ರೇಷ್ಠತೆ ಹೊರ ಹೊಮ್ಮುತ್ತದೆ. ಆ ನಿಟ್ಟಿನಲ್ಲಿ ನೀವು ಎದೆಗುಂದದೆ ಮುನ್ನುಗ್ಗಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಉಪ ನಿರ್ದೇಶಕರ ಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆಯ ಶಾಖಾಧಿಕಾರಿ ಪ್ರಕಾಶ ಗೊಂಗಡಿ, ಪ್ರಾಚಾರ್ಯ ಶ್ರೀಕಾಂತ ಕೆ.ಎಸ್ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಎಕ್ಸಲಂಟ್ ಪ್ರಕಾಶನ ಸಂಸ್ಥೆಯ ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಲಾಯಿತು. ಕನ್ನಡ ವಿಭಾಗದ ಮುಖ್ಯಸ್ಥ ಶರಣಗೌಡ ಪಾಟೀಲ ಸ್ವಾಗತಿಸಿದರು.ಆಂಗ್ಲವಿಭಾಗದಉಪನ್ಯಾಸಕ ಶ್ರದ್ಧಾ ಜಾಧವ ನಿರೂಪಿಸಿದರು, ಮುಸ್ತಾಕ ಮಲಘಾಣ ವಂದಿಸಿದರು.

# ಹಾವು ಕಚ್ಚಿ ಕೂಲಿ ಕಾರ್ಮಿಕೆ ಸಾವು



**ತಾಳಿಕೋಟೆ :** ಪಟ್ಟಣದ ಎಪಿಎಂಸಿ ಮಾರ್ಕೆಟ್ ಯಾರ್ಡಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಮಹಿಳೆಯೋರ್ವಳಿಗೆ ವಿಷಕಾರಿ ಹಾವು ಕಚ್ಚಿ ಸಾವನ್ನಪ್ಪಿದ ಘಟನೆ ಮಂಗಳವಾರರಂದು ನಡೆದಿದೆ.

ಹಾವು ಕಚ್ಚಿ ಮೃತಪಟ್ಟ ಮಹಿಳೆ ಸಾವಿತ್ರಿ ಅಶೋಕ ಮೂಕೀಹಾಳ(48) ಎಂದು ಗುರುತಿಸಲಾಗಿದ್ದು ದಿನನಿತ್ಯ ಪಟ್ಟಣದ ಎಪಿಎಂಸಿ ಮಾರ್ಕೆಟ್‌ಯಾರ್ಡಿನ ಎಸ್.ಸಿ.ಪಾಟೀಲ ಎಂಬವರ ಅಡತಿ ಅಂಗಡಿಯಲ್ಲಿ ಕಾಳುಕಡಿ ಸ್ವಚ್ಛಗೊಳಿಸುವ ಕೆಲಸಕ್ಕೆ ತೆರಳುತ್ತಿದ್ದಳು ಎಂದಿನಂತೆ ಮಂಗಳವಾರರಂದು ಬೆಳಿಗ್ಗೆ 10 ಗಂಟೆಯ ಸುಮಾರಿಗೆ ಕೆಲಸದಲ್ಲಿ ತೊಡಗಿರುವಾಗ ಎಡಗಾಲಿನ ಹಿಮ್ಮಡಿಗೆ ವಿಷಕಾರಿ ಹಾವು ಕಚ್ಚಿದೆ ಈ ವಿಷಯ ತಿಳಿದ ಅಂಗಡಿಯವರು ಹಾಗೂ ಕುಟುಂಭಸ್ಥರು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ತೆರಳಿ ಪ್ರಾಥಮಿಕ ಚಿಕಿತ್ಸೆ ಕೊಡಿಸುವದರೊಂದಿಗೆ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ತೆರಳುವ ಸಮಯದಲ್ಲಿ ಮಹಿಳೆಯು ಮೃತಪಟ್ಟಿದ್ದಾಳೆ ಎಂದು ಪುತ್ರ ರಾಜೇಶ ಅಶೋಕ ಮೂಕೀಹಾಳ ಅವರು ತಾಳಿಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿದ್ದಾರೆ. ಪ್ರಕರ್ಣ ದಾಖಲಿಸಿಕೊಂಡಿರುವ ಪೊಲೀಸ್‌ರು ಮುಂದಿನ ತನಿಖೆ ಕೈಗೊಂಡಿದ್ದಾರೆ.

# ಜಿಲ್ಲಾಧಿಕಾರಿಗಳಿಂದ ವಿವಿಧ ಕಾಮಗಾರಿಗಳ ಪರೀಶೀಲನೆ

**ವಿಜಯಪುರ :** ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಶುಕ್ರವಾರ ನಗರದ ವಿವಿಧ ಕಾಮಗಾರಿಗಳ ಸ್ಥಳಕ್ಕೆ ಭೇಟಿ ನೀಡಿ ಪರೀಶೀಲನೆ ನಡೆಸಿದರು.

ಬೆಳಿಗ್ಗೆ ನಗರದ ಕೇಂದ್ರ ಬಸ್ ನಿಲ್ದಾಣಕ್ಕೆಭೇಟಿನೀಡಿಪರೀಶೀಲನೆ ನಡೆಸಿದ ಅವರು, ನಿಲ್ದಾಣದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಪ್ರಯಾಣಿಕರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕು. ಯಾವುದೇ ಪ್ರಯಾಣಿಕ–ರಿಗೆ ಅನಾನೂಕೂಲವಾಗದಂತೆ ಎಚ್ಚರಿಕೆ ವಹಿಸಬೇಕು. ನಿಲ್ದಾಣದಲ್ಲಿ ಪ್ರಯಾಣಿಕ–ರಿಗಾಗಿ ಶುದ್ಧ ಕುಡಿಯುವ ನೀರು, ಸೂಕ್ತ ಶೌಚಾಲಯ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು. ಬಸ್ ನಿಲ್ದಾಣದ ಆವರಣದಲ್ಲಿ ನಿರ್ಮಾಣವಾಗುತ್ತಿರುವಇಂದಿರಾ ಕ್ಯಾಂಟೀನ್ ಕಟ್ಟಡವನ್ನು ವೀಕ್ಷಿಸಿ ಪರೀಶೀಲನೆ ನಡೆಸಿದ ಅವರು, ಕ್ಯಾಂಟೀನ್ ಮುಂಭಾಗದಲ್ಲಿ ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ಸೇ–ರಿದಂತೆ ರಸ್ತೆ, ವಿವಿಧ ಕಾಮಗಾರಿ ಪರೀಶೀಲನೆ ಅಗತ್ಯ ಸಲಹೆ–ಸೂಚನೆ ನೀಡಿದರು.



ನಗರದ ನವಬಾಗ ರಸ್ತೆ ಕಾಮಗಾ–ರಿಯನ್ನು ಪರೀಶೀಲಿಸಿದ ಅವರು, ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಬೇಕು. ನಗರದ ಲಲಿತ ಮಹಲ್ ಹೊಟೆಲ್ ಹತ್ತಿರದ ಕೋಟೆಗೋಡೆ ಪಕ್ಕದಲ್ಲಿ ಖಾಸಗಿ ಬಸ್‌ಗಳಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಸ್ಥಳ ಪರೀಶೀಲನೆ ನಡೆಸಿದ ಅವರು, ಈ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ನಗರ ಕೇಂದ್ರ ಗ್ರಂಥಾಲಯಕ್ಕೆ ಭೇಟಿ ನೀಡಿ, ವಿದ್ಯಾರ್ಥಿಗಳಿಗೆ ಅನುಕೂಲಕ ಕಲ್ಪಿಸುವ ನಿಟ್ಟಿನಲ್ಲಿ ಸುಸಜ್ಜಿತವಾತಾವರಣನಿರ್ಮಾಣ, ಗ್ರಂಥಾಲಯಕ್ಕಾಗಮಿಸುವ ವಿದ್ಯಾರ್ಥಿಗಳು, ಓದುಗರಿಗೆ ಮೂಲಭೂತ ಸೌಲಭ್ಯ ಇರುವಂತೆ ನೋಡಿಕೊಳ್ಳಬೇಕು ಎಂದು ಅವರು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಆಯುಕ್ತವಿಜಯಕುಮಾರ ಮೆಕ್ಕಳಕಿ ಸೇರಿದಂತೆ ಜಿಲ್ಲಾಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತ–ರಿದ್ದರು.

# ಇಳಕಲ್ ಪೋಲಿಸರ ಭರ್ಜರಿ ಸಾಹಸ: ಓರ್ವ ಕಳ್ಳನ ಬಂಧನ 180 ಗ್ರಾಂ ಚಿನ್ನ ವಶ

**ಇಳಕಲ್ :** ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಊಟಕ್ಕೆ ನಿಲ್ಲಿಸಿದ ಬಸ್ ಗಳ ಪ್ರಯಾಣಿಕರ 180 ಗ್ರಾಂ ಚಿನ್ನದ ಒಡವೆ ಮತ್ತು ಎರಡು ಸಾವಿರ ನಗದು ಹಣವನ್ನು ಪೋಲಿಸರು ಪತ್ತೆ ಹಚ್ಚಿ ವಶಪಡಿಸಿಕೊಂಡಿದ್ದಾರೆ.

ನಗರದ ಎಂಕೆ ಡಾಬಾ ಎಂಬಲ್ಲಿ ಬೆಂಗಳೂರಿಗೆ ಹೋಗುವ ಬಸ್ ಗಳನ್ನು ನಿಲ್ಲಿಸಿದಾಗ ಈ ಎರಡು ಪ್ರಕರಣಗಳು ನಡೆದಿದ್ದು ಪೋಲಿಸರು ನಡೆಸಿದ ದಾಳಿಯಲ್ಲಿ ಓರ್ವ ವ್ಯಕ್ತಿ ಸಿಕ್ಕಿ ಬಿದ್ದಿದ್ದು ಆತನಿಂದ 180 ಗ್ರಾಂ ಚಿನ್ನದ ಒಡವೆಗಳನ್ನು ಮತ್ತು ಎರಡು ಸಾವಿರ ರೂ ನಗದು ಹಣವನ್ನು ವಶ ಪಡಿಸಿಕೊಳ್ಳಲಾಗಿದೆ.

ಬಾಗಲಕೋಟ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಮರನಾಥ–ರೆಡ್ಡಿ, ಹೆಚ್ಚುವರಿ ಪೋಲಿಸ್ ಅಧೀಕ್ಷಕ ಪ್ರಸನ್ನ ದೇಸಾಯಿ, ಇನ್ನೋರ್ವ ಹೆಚ್ಚುವರಿ ಅಧೀಕ್ಷಕ ಮಹಾಂತೇಶ ಜಿದ್ದಿ, ಹುನಗುಂದ ಡಿವಾಯ್ ಎಸ್ ಪಿ ವಿಶ್ವನಾಥ–ರಾವ್ ಕುಲಕರ್ಣಿ ಸಿಪಿಐ ಸುನೀಲ ಸವದಿ ಮಾರ್ಗದರ್ಶನದಲ್ಲಿ ಪಿಎಸ್ ಐ ಷಹಜಹಾನ ನಾಯಕ, ಅಪರಾಧ ವಿಭಾಗದ ಸಿ ಬಿ ಕಿರಿಶ್ಯಾಳ ಅಮೀನಗಡ ಪೋಲಿಸ್ ಠಾಣೆಯ ಅಪರಾಧ ವಿಭಾಗದ ಪಿಎಸ್ ಐ ವಾಯ್ ಎಚ್ ಪಠಾಣ, ಸಿಬ್ಬಂದಿಗಳಾದ ಎ ಎಂ ಗೋಲಪ್ಪನವರ, ಜಿ ಎ ಪವಾರ, ಹುನಗುಂದ ಸರ್ಕಲ್ ಪೋಲಿಸ್ ಠಾಣೆಯ ಮತ್ತು ಇಳಕಲ್ ಶಹರ್ ಪೋಲಿಸ್ ಠಾಣೆಯ ಜಿ ಎ ಸುತಗುಂಡಾರ,ರಜಾಕ್ ಗುಡದಾರಿ,ಸಿ ಬಿ ಬಳಿಗಾರ , ಸಿ ಬಿ ಜವಳಗೇರಿ ಬಸವರಾಜ ಕಟಗಿ, ಬಸು ಜಗಲಿ, ಚಂದ್ರು ಗಟ್ಟೆಪ್ಪಗೋಳ , ಮುತ್ತು ಬಿಸನಾಳ ಸೇರಿಕೊಂಡು ಈ ಎರಡು ಪ್ರಕರಣಗಳನ್ನು ಭೇದಿಸಿ ವ–ರಿಷ್ಠಾಧಿಕಾರಿಗಳ ಮೆಚ್ಚುಗೆಯನ್ನು ಪಡೆದಿದ್ದಾರೆ.

**ವರದಿ ನಬಿ ಹುಣಚಗಿ**

# ಯೋಗ ಮಹೋತ್ಸವದ ನಿಮಿತ್ಯ ಸಸಿ ವಿತರಣೆ

**ಚಿಮ್ಮಡ :** ಗ್ರಾಮೀಣ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಗುರುಕುಲ ಕ್ಯಾಂಪಸ್ ತೇರದಾಳದಿಂದ ಗ್ರಾಮದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ನಿಮಿತ್ಯ ಆಯುರ್ವೇದ ಗುಣಗಳುಳ್ಳ ಸಸಿ ನೆಡುವ ಹಾಗೂ ವಿತರಣಾ ಕಾರ್ಯಕ್ರಮ ಗುರುವಾರ ನಡೆಯಿತು.

ಸ್ಥಳಿಯ ಪಿ. ಪಿ. ಮಾಳಿಗಡ್ಡಿ ಮಠದ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಔಷಧೀಯ ಗುಣ ಹೊಂದಿರುವ ಬೆಟ್ಟದನೆಲ್ಲಿ, ಮಾವು, ನೋಣಿ, ಕಾಂಚಣ, ಕಂಚವಾಳ, ಬಂಗಾಲಿ, ಹೊಂಗೆ ಸೇರಿದಂತೆ ಹಲವಾರು ಬಗೆಯ ಸಸಿಗಳನ್ನು ವಿತರಿಸಲಾಯಿತು.



ಶಾಲೆಯ ಆವರಣದಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸ್ಥಳಿಯ ವಿರಕ್ತಮಠದ ಪ್ರಭು ಮಹಾಸ್ವಾಮಿಗಳು ಮಾತನಾಡಿ ಹಿಂದಿನ ಕಾಲದಲ್ಲಿ ಪ್ರತಿಯೊಂದು ಸಣ್ಣ ಪುಟ್ಟ ಕಾಯಿಲೆಗಳಿಗೆ ವೈದ್ಯರ ಬಳಿ ಹೋಗದೆ ಮನೆಯಲ್ಲಿಯೇ ಆಯುರ್ವೇದ ಪದ್ಧತಿಯ ಮೂಲಕ ಮನೆ ಮದ್ದು ನೀಡುವ ಮೂಲಕ ಕಾಯಿಲೆಗಳನ್ನು ಗುಣ ಪಡಿಸಿ ಕೊಳ್ಳುತ್ತಿದ್ದರು.

ಇತ್ತೀಚೆಗೆ ಅಂಥಹ ಔಷದೀಯ ಸಸಿಗಳುಕೂಡಅಪರೂಪವಾಗಿವೆ. ತೇರದಾಳ ಆಯುರ್ವೇದ ಮಹಾವಿದ್ಯಾಲಯಆಯುರ್ವೇದ ಸಸಿಗಳನ್ನು ವಿತರಿಸುವ ಮೂಲಕ ಉತ್ತಮ ಕಾರ್ಯ ಮಾಡಿದೆ. ಗ್ರಾಮಸ್ಥರು ಇದರ ಪ್ರಯೋಜನ ಪಡೆಯಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾಲಯದ ಉಪ ಪ್ರಾಚಾರ್ಯ ಡಾ. ಎಸ್. ಸಿ. ನುಚ್ಚಿ ವಹಿಸಿದ್ದರು. ಪಿ. ಪಿ. ಮಾಳಿಗಡ್ಡಿ ಮಠದ ಮುಖ್ಯ ಗುರುಮಾತೆ ಸರೋಜಿನಿ ಡಿ. ಹಿರೇಮಠ,

ಡಾ. ವ್ಹಿ. ವ್ಹಿ. ಕುಲಕರ್ಣಿ, ಡಾ. ಆರ್. ಬಿ. ಹಾಡಕಾರ, ರಾಷ್ಟ್ರೀಯ ಸೇವಾ ಯೋಜನೆಯ ಮುಖ್ಯಸ್ಥ ಡಾ. ಬಿ. ಎಸ್. ಜಂಬಗಿ, ಯೋಗ ಸಂಯೋಜಕ ಡಾ. ಎಸ್. ಜಿ. ಮಠಪತಿ, ಡಾ. ಎ. ಎ. ಕುಮಠಳ್ಳಿ, ಡಾ. ಕೆ. ವ್ಹಿ. ಕುಲ್ಲೂರ್, ಡಾ. ಬೇಬಿ ಕುಂಬಾರ ಮತ್ತು ಶಿಕ್ಷಕ ವೃಂದ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ವಿದ್ಯಾಲಯದ ವೈದ್ಯ ಪ್ರಮುಖರನ್ನು ಶಾಲಾ ಸಂಸ್ಥೆಯಿಂದ ಸತ್ಕರಿಸಿ ಗೌರವಿಸಲಾಯಿತು.

# ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಕಾನೂನು ಸೇವೆ ತಲುಪಬೇಕು: ಹಿರಿಯ ದಿವಾಣಿ ನ್ಯಾಯಾಧೀಶ ಚಂದ್ರಶೇಖರ ದಿಡ್ಡಿ

ಭಾರತೀಯ ಕಾನೂನು ವ್ಯವಸ್ಥೆಯನ್ನು ಅರಿಯುವುದು ಭಾವಿ ಪ್ರಜೆಗಳಾದ ತಮ್ಮ ಆದ್ಯ ಕರ್ತವ್ಯವಾಗಿದೆ ಕಾನೂನಿನ ಅಡಿಯಲ್ಲಿ ನೀವು ತುಂಬಾ ಜಾಗೃತೆಯಾಗಿರಬೇಕು. ನ್ಯಾಯಕ್ಕಾಗಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಸಹಾಯವಾಣಿ 151000 ಉಚಿತವಾಗಿ ಕರೆ ಮಾಡಿ ಸಹಾಯ ಕೊರಬೇಕೆಂದು ಹಿರಿಯ ದಿವಾಣಿ ನ್ಯಾಯಾಧೀಶ ಚಂದ್ರಶೇಖರ ರೆಡ್ಡಿ ಹೇಳಿದರು.

ಕೊಣ್ಣೂರ ವಾಣಿಜ್ಯ ಮತ್ತು ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬಾಗಲಕೋಟೆ, ತಾಲೂಕ ಕಾನೂನು ಸೇವಾ ಸಮಿತಿ, ಬನಹಟ್ಟಿ. ವಕೀಲರ ಸಂಘ, ಬನಹಟ್ಟಿ .ಇವರ ಆಶ್ರಯದಲ್ಲಿ ನಡೆದ ಕಾನೂನು ಅರಿವು ನೆರವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು



ಮೂರು ಲಕ್ಷಕ್ಕಿಂತ ಕಡಿಮೆ ಆದಾಯವಿರುವ ವ್ಯಕ್ತಿಗಳಿಗೆ ಕಾನೂನು ಪ್ರಾಧಿಕಾರದಿಂದ ಉಚಿತವಾಗಿ ನೆರವನ್ನು ನೀಡುತ್ತದೆ ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಕಾನೂನು ಸೇವೆ ತಲುಪಬೇಕೆಂಬುದು ಪ್ರಾಧಿಕಾರದ ಉದ್ದೇಶ ಎಂದರು. ಸಾತಿ ಎಂಬ ಯೋಜನೆ ಅಡಿ ಅಲೆಮಾರಿ ಜನಾಂಗದವ–ರಿಗೆ ಅನಾಥರಿಗೆ ನೆರವು ನೀಡುವುದಲ್ಲದೆ ಅವರಿಗೆ ಮೂಲಭೂತ ಸೌಲಭ್ಯಗಳನ್ನ ಒದಗಿಸಲಾಗುವುದು ಆಶಾ ಎಂಬ ಯೋಜನೆ ಅಡಿಯಲ್ಲಿ ಬಾಲ್ಯ ವಿವಾಹ ತಡೆಗಟ್ಟುವುದು ಅಂತವರಿಗೆ ಕಾನೂನು ನೆರವನ್ನು ನೀಡುವುದು ಸಂವಾದ ಕಾರ್ಯಕ್ರಮದ ಮುಖಾಂತರ ಅಳಿವಿನ ಹಂಚಿನಲ್ಲಿರುವ ಆದಿವಾಸಿ ಬುಡಕಟ್ಟು ಜನ–ರಿಗೆ ಕಾನೂನಿನ ಅರಿವನ್ನ ಮೂಡಿಸುವುದಾಗಿದೆ ಎಂದು ನ್ಯಾಯವಾದಿ ವ್ಹಿ.ಎಸ್. ಭಗವತಿ ತಮ್ಮ ಉಪನ್ಯಾಸದಲ್ಲಿ ಹೇಳಿದರು ಸಮಾರಂಭದಲ್ಲಿ ಹಿರಿಯ ನ್ಯಾಯಾಧೀಶರಾದ ಚಂದ್ರಶೇಖರ ದಿಡ್ಡಿ ನ್ಯಾಯವಾದಿ ವ್ಹಿ.ಎಸ್ ಭಗವತಿ, ಆಡಳಿತಾಧಿಕಾರಿ ಶಿತಲ ಕೊಣ್ಣೂರ, ಉಪ ಪ್ರಾಚಾರ್ಯರಾದ ಶಿವಾನಂದ ಕಂದಗಲ್ , ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತ–ರಿದ್ದರು.

## ಶಾಂತಿನಿಕೇತನ ಶಾಲೆಯಲ್ಲಿ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ

**ಕುಕನೂರ್ :** ಜಿಲ್ಲೆಯ ಕುಕನೂರ ತಾಲೂಕಿನ ಮಂಗಳೂರು ಗ್ರಾಮದ ಶ್ರೀಮಂಗಳೇಶ್ವರ ಶಿಕ್ಷಣ ಸಂಸ್ಥೆ ಶಾಂತಿನಿಕೇತನ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಇಂದು 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಉದ್ಘಾಟನೆಯನ್ನು ಕೊಪ್ಪಳ ನಗರದ ಪತಂಜಲಿ ಯೋಗ ಸಮಿತಿಯ ಜಿಲ್ಲಾ ಸದಸ್ಯರಾದ ಶಿವರಾಜ ಸಿ ಮುತ್ತಾಳ ಇವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಪ್ರಾಚೀನ ಕಾಲದಿಂದಲೂ ಋಷಿ ಮುನಿಗಳಿಂದಲೂ ಯೋಗ, ಜ್ಞಾನ, ಪ್ರಾಣಯಾಮ ದೇಹದ ಸದೃಢತೆಗಾಗಿ ದೈಹಿಕ ಮಾನಸಿಕ ಮನುಷ್ಯನ ಆರೋಗ್ಯದ ದೃಷ್ಟಿಯಿಂದ ಆಗಿನ ಕಾಲದಲ್ಲಿಯೂ ಯೋಗ ಮಾಡುತ್ತಾ ಬಂದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ನಮ್ಮ ಭಾರತ ದೇಶದ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿಜಿ ಅವರು 2015 ಜೂನ್ 21ರಂದು ದೆಹಲಿಯ ರಾಮ್ ಲೀಲಾ ಮೈದಾನದಲ್ಲಿ ಪ್ರಥಮ ಬಾರಿಗೆ ಅಂತರಾಷ್ಟ್ರೀಯ ಮಟ್ಟದ ಯೋಗ ದಿನಾಚರಣೆ ಕಾರ್ಯಕ್ರಮ ಜಾರಿಗೆ ಮಾಡಿದ ಕೀರ್ತಿ ನಮ್ಮ ಪ್ರಧಾನಿಯವರಿಗೆ ಸಲ್ಲುತ್ತದೆ ಎಂದರು. ಪ್ರಧಾನಿ ನರೇಂದ್ರ ಮೋದಿಜಿ ಅವರು ಆಂಧ್ರ ಪ್ರದೇಶ್ ರಾಜ್ಯದ ವಿಶಾಖಪಟ್ಟಣದ ಸಮುದ್ರದ ಹತ್ತಿರ ಇರುವ ಬೀಚಿನಲ್ಲಿ ಸುಮಾರು ಮೂರು ಲಕ್ಷ ಯೋಗ ಶಿಬಿರಾರ್ಥಿಗಳೊಂದಿಗೆ ಯೋಗ ದಿನಾಚರಣೆಯನ್ನು ಆಚರಣೆ ಮಾಡಿದರು ಎಂದವರು ತಿಳಿಸಿದರು.

ಇಂದು ನಾವು 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಮಂಗಳೂರು ಗ್ರಾಮದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಶಾಂತಿನಿಕೇತನ ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಕ್ಷರು, ಕಾರ್ಯದರ್ಶಿಗಳು ಸಂಸ್ಥೆಯ ಮುಖ್ಯ ಗುರುಗಳು ಹಾಗೂ ಸಿಬ್ಬಂದಿ ವರ್ಗದವರು ಅಚ್ಚುಕಟ್ಟಾಗಿ ಈ ಕಾರ್ಯಕ್ರಮ ಆಯೋಜನೆ ಮಾಡಿರುವುದು ನಮಗೆ ಸಂತೋಷವಾಗಿದೆ ಎಂದು ಹೇಳಿದರು. ಈ ಶಾಲೆಯ ಮಕ್ಕಳು ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡು ಬರಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಈ ಶಾಲೆಯಲ್ಲಿ ಕಳೆದ ವರ್ಷ ನಡೆದ ಮುರಾರ್ಜಿ ವಸತಿ ಶಾಲೆಯ ಪರೀಕ್ಷೆಯಲ್ಲಿ ಸುಮಾರು 35ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಯ್ಕೆ ಆಗಿರುವುದು ಈ ಸಂಸ್ಥೆಯ ಸಿಬ್ಬಂದಿ ವರ್ಗದವರ ಅವಿರತಶ್ರಮ ಶ್ಲಾಘನೀಯ ಎಂದು ಹೇಳಿದರು. ವಿದ್ಯಾರ್ಥಿಗಳು ಈ ಸ್ಪರ್ಧಾತ್ಮಕ ಯುಗದಲ್ಲಿ ನಿಮ್ಮ ಮುಂದಿನ ಭವಿಷ್ಯಕ್ಕಾಗಿ ನೀವು ಈ ಶಾಲೆಯಲ್ಲಿ ಉತ್ತಮ ಶಿಕ್ಷಣ ಪಡೆದು ಮುಂದಿನ ದಿನಗಳಲ್ಲಿ ನೀವು ನವೋದಯ, ಸೈನಿಕ, ವಸತಿ ಶಾಲೆಗಳಿಗೆ ಆಯ್ಕೆ ಆಗಿ ಹೋಗಿ ಸಿಇಟಿ, ನೀಟ್ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಐಎಎಸ್, ಐಪಿಎಸ್, ಇಂಜಿನಿಯರ್, ಐಐಟಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಈ ಸಂಸ್ಥೆಗೆ ಕೀರ್ತಿ ತರಬೇಕೆಂದು ವಿದ್ಯಾರ್ಥಿಗಳಿಗೆ ಅವರು ಸಲಹೆ ನೀಡಿದರು.

ವಿಶ್ವನಾಥ ಮರಿಬಸಪ್ಪನವರ ಮಾಜಿ ತಾಲೂಕು ಪಂಚಾಯತ ಉಪಾಧ್ಯಕ್ಷರು ಮಾತನಾಡಿ ಮನುಷ್ಯನಿಗೆ ದೈಹಿಕವಾಗಿ ಮಾನಸಿಕವಾಗಿ ಸದೃಢವಾಗಿರಲು ಯೋಗ ಪ್ರಾಣಾಯಾಮದಿಂದ ಮಾತ್ರ ಸಾಧ್ಯ ಎಂದು ಹೇಳಿದರು ಶಿವರಾಜ ಮುತ್ತಾಳ ಅವರು ಕಳೆದ ವರ್ಷ ಇದೇ ಶಾಲೆಯಲ್ಲಿ ಯೋಗ ಅಭ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಕ್ಕಳಿಗೆ ಯೋಗ ಅಭ್ಯಾಸ ಮಾಡಿಸಿರುವುದು ನಮಗೆ ತುಂಬಾ ಸಂತೋಷವಾಗಿದೆ ಎಂದು ಹೇಳಿದರು. ಅದೇ ರೀತಿ ಇಂದು 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಆಗಮಿಸಿ ವಿದ್ಯಾರ್ಥಿಗಳಿಗೆ ಶಾಲೆಯ ಶಿಕ್ಷಕರಿಗೆ ಯೋಗಾಸನದ ಮಹತ್ವ ಯೋಗ ಮಾಡುವುದರಿಂದ ಮನುಷ್ಯನ ಆರೋಗ್ಯದಲ್ಲಿ ಯಾವುದೇ ಕಾಯಿಲೆಗಳು ಬರುವುದಿಲ್ಲ ದೇಹದ ಸದೃಢತೆಗಾಗಿ ನಾವೆಲ್ಲರೂ ದಿನಾಲೂ ಬೆಳಗ್ಗೆ ಯೋಗ ಪ್ರಾಣಾಯಾಮ ಮಾಡಬೇಕೆಂದು ಸಲಹೆ ನೀಡಿದರು.

ನಮ್ಮ ದೇಶದ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿಜಿ ಅವರು 11ನೇ ವರ್ಷದ ಅಂತರಾಷ್ಟ್ರೀಯ ಮಟ್ಟದ ಯೋಗ ದಿನಾಚರಣೆಯನ್ನು ಇಂದು ಆಂಧ್ರಪ್ರದೇಶದ ವಿಶಾಖಪಟ್ಟಣದಲ್ಲಿ ಆಚರಣೆ ಮಾಡುತ್ತಿರುವುದು ನಮಗೆ ಹೆಮ್ಮೆಯ ವಿಷಯ ಎಂದವರು ಹೇಳಿದರು.

ರವಿ ಡಿ ಮಳಗಿ ಸಿ ಆರ್ ಪಿ ಮಾತನಾಡಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಈ ಸಂಸ್ಥೆಯಲ್ಲಿ ಈ ಕಾರ್ಯಕ್ರಮ ಆಯೋಜನೆ ಮಾಡಿರುವುದು ಅತ್ಯಂತ ಸಂಭ್ರಮ ಪಡುವ ವಿಷಯ ಎಂದು ಹೇಳಿದರು. ಉತ್ತಮ ಯೋಗವು ನಿಮ್ಮ ದೇಹ ಮತ್ತು ಮನಸ್ಸನ್ನು ಸುಧಾರಿಸುವುದಲ್ಲದೆ ದೈಹಿಕ ಮಾನಸಿಕ ಮತ್ತು ಆಧ್ಯಾತ್ಮಿಕ ಬದಲಾವಣೆಗಳನ್ನು ತರುತ್ತದೆ ಎಂದು ಹೇಳಿದರು.

ರವೀಂದ್ರನಾಥ ಕೊಟ್ರಪ್ಪ ತೋಟದ ಸಂಸ್ಥೆಯ ಅಧ್ಯಕ್ಷರು ಪತ್ರಕರ್ತರು ಮಾತನಾಡಿ ಯೋಗಾಭ್ಯಾಸವು ಆರೋಗ್ಯಕ್ಕೆ ಬಹಳ ಒಳ್ಳೆಯದು ಯೋಗಾಸನಗಳು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ ನಿಯಮಿತವಾಗಿ ಯೋಗ್ಯ ಅಭ್ಯಾಸ ಮಾಡುವುದರಿಂದ ಒತ್ತಡ ಕಡಿಮೆಯಾಗುತ್ತದೆ ಏಕಾಗ್ರತೆ ಹೆಚ್ಚಾಗುತ್ತದೆ ಎಂದವರು ಹೇಳಿದರು. ನಮ್ಮ ಶಾಲೆಯಲ್ಲಿ ಇಂದಿನ ದಿವಸ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ವಿಶೇಷ ಅತಿಥಿಯಾಗಿ ಶಿವರಾಜ ಸಿ ಮುತ್ತಾಳ ಅವರು ಆಗಮಿಸಿ ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಯೋಗಭ್ಯಾಸ ಮಾಡಿಸಿದರು.

ನಮ್ಮ ಶಿಕ್ಷಣ ಸಂಸ್ಥೆ ಮಂಗಳೂರು ಗ್ರಾಮದಲ್ಲಿ ಸುಮಾರು 23 ವರ್ಷಗಳಿಂದ ಪ್ರಾರಂಭ ಮಾಡಿ ಈ ಶಾಲೆಯಲ್ಲಿ ಅನೇಕ ವಿದ್ಯಾರ್ಥಿಗಳು ಶಿಕ್ಷಣ ಪಡೆದು ಬೇರೆ ಬೇರೆ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವುದು ಈ ಶಾಲೆಗೆ ಹೆಮ್ಮೆ ವಿಷಯ ಎಂದವರು ಹೇಳಿದರು.

ವೀರೇಶ ಕುಂಬಾರ ಮುಖ್ಯ ಗುರುಗಳು ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಮೇಘನಾ ರವೀಂದ್ರನಾಥ ತೋಟದ, ಶಿಕ್ಷಕರಾದ ದೇವಣ್ಣ ದೇಸಾಯಿ, ಸುಜಾತ ಕಂದಗಲ್, ಶಿವಲೀಲಾ ಕಂದಗಲ್, ದೀಪಾ ಬಾರಕೇರ, ನಾಗರತ್ನ ದೊಡ್ಮನಿ, ಅಪೂರ್ವ ಹಾಳಕೇರಿ, ಆಯಾ ಮುದುಕಮ್ಮ ಹಡಪದ ಪಾಲಕರ ಪ್ರತಿನಿಧಿ ನಾಗನಗೌಡ್ರ ಪೊಲೀಸಪಾಟೀಲ, ಮುದ್ದು ಮಕ್ಕಳು ಹಾಜರಿದ್ದರು.

ಶರಣಪ್ಪ ಗೊಂಡಬಾಳ ಹಿರಿಯ ಶಿಕ್ಷಕರು ಕಾರ್ಯಕ್ರಮದ ಸ್ವಾಗತ ನಿರ್ವಹಣೆ ಮಾಡಿದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618